ಕನ್ನಡ ತತ್ವಪದಗಳಲ್ಲಿ ಮಹಿಳಾ ಸಂವೇದನೆಯ ಸ್ವರೂಪ

ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಸಂತೋಷ ಹೆಚ್ ಎಸ್

ನೋಂದಣಿ ಸಂಖ್ಯೆ :.MU/EXB/Ph.D/CR.32/Kan./2020-21/E.13, ದಿನಾಂಕ : 10-06-2020

ಮಾರ್ಗದರ್ಶಕರು

ಡಾ. ಲಕ್ಷ್ಮೀದೇವಿ ಎಲ್

ಕನ್ನಡ ಸಹಪ್ರಾಧ್ಯಾಪಕರು

ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಹಂಪನಕಟ್ಟೆ

ಮಂಗಳೂರು–೫೭೫೦೦೧

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – ೫೭೪೧೯೯

೨೦೨೫

ಪರಿವಿಡಿ

- **ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಮತ್ತು ಸ್ವರೂಪ**
  ಪ್ರಸ್ತಾವನೆ
- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
- ಅಧ್ಯಯನದ ಮಹತ್ವ
- ಅಧ್ಯಯನದ ಸಮೀಕ್ಷೆ
- ಅಧ್ಯಯನದ ವೈಧಾನಿಕತೆ
- ಅಧ್ಯಯನದ ಪ್ರಸ್ತುತತೆ

ಅಧ್ಯಾಯ : ೧ ಮಹಿಳಾ ಸಂವೇದನೆ: ತಾತ್ವಿಕ ವಿವೇಚನೆ

೧.೧ ಪೀಠಿಕೆ

೧.೨ ಮಹಿಳಾ ಸಂವೇದನೆ: ತಾತ್ವಿಕತೆ

೧.೩ ಭಾರತೀಯ ಹಾಗೂ ಕನ್ನಡ ಭಕ್ತಿ ಪರಂಪರೆ

೧.೪ ಜೈವಿಕತೆಯ ವೈಶಿಷ್ಟ್ಯತೆ ಮತ್ತು ಕೌಟುಂಬಿಕ ವ್ಯವಸ್ಥೆ

೧.೫ ಆರ್ಥಿಕ ಸ್ಥಿತಿಗತಿ ಮತ್ತು ಆಡಳಿತ ವ್ಯವಸ್ಥೆ

೧.೬ ಧಾರ್ಮಿಕ ಪ್ರಭುತ್ವ

೧.೭ ಸ್ತ್ರೀವಾದದ ಪರಿಭಾಷೆ

ಅಧ್ಯಾಯ – ೦೨ ತತ್ವಪದಗಳಲ್ಲಿ ಮಹಿಳಾ ಪಾತ್ರ ಚಿತ್ರಣ

೨.೧ ತತ್ವಪದಗಳಲ್ಲಿ ಪುರಾಣದ ಮಹಿಳಾ ರೂಪಗಳು

೨.೨ ತತ್ವಪದಗಳಲ್ಲಿ ಚಾರಿತ್ರಿಕ ಮಹಿಳೆಯರು

೨.೩ ತತ್ವಪದಗಳಲ್ಲಿ ಸಾಹಿತ್ಯಕ ನೆಲೆಯ ಮಹಿಳೆಯರು

ಅಧ್ಯಾಯ – ೦೩ ತತ್ವಪದಗಳಲ್ಲಿ ಮಹಿಳಾ ತಾತ್ವಿಕ ಸ್ವರೂಪ

೩.೧ ದೇಹ ಮೀಮಾಂಸೆ ಸ್ವರೂಪ

೩.೨ ಮನೋ ಮೀಮಾಂಸೆ ವಿನ್ಯಾಸ

೩.೩ ಜೈವಿಕ ಮೀಮಾಂಸೆ ಆಯಾಮ

ಅಧ್ಯಾಯ – ೦೪ ತತ್ವಪದಗಳಲ್ಲಿ ಮಹಿಳಾ ಸಂವೇದನೆಯ ನೆಲೆಗಳು

೪.೧ ಸೌಂದರ್ಯದ ನೆಲೆ

೪.೨ ಉಪಭೋಗದ ನೆಲೆ

೪.೩ ವಿವಾಹ ಮತ್ತು ವಿವಾಹೇತರ ನೆಲೆ

೪.೪ ಅನುಭಾವದ ಆಯಾಮ

ಅಧ್ಯಾಯ – ೦೫ ತತ್ವಪದಗಳಲ್ಲಿ ಪ್ರತಿಭಟನಾತ್ಮಕ ಮಾದರಿ

೫.೧ ಸಮಾಜದ ಪ್ರಭುತ್ವದ ವಿರುದ್ಧ ಪ್ರತಿಭಟನೆ

೫.೨ ಮೌಢ್ಯ ಆಚರಣೆಗಳ ವಿರುದ್ಧ ಪ್ರತಿಭಟನೆ

೫.೩ ಲಿಂಗ ತಾರತಮ್ಯದ ವಿರುದ್ಧ ಪ್ರತಿಭಟನೆ

೫.೪ ಅಸಮಾನತೆಯ ವಿರುದ್ಧ ಪ್ರತಿಭಟನೆ

ಅಧ್ಯಯನದ ಫಲಿತಗಳು ಸಾಧ್ಯತೆಗಳು

- ಅಧ್ಯಯನದ ಫಲಿತಗಳು
- ಅಧ್ಯಯನದ ಸಾಧ್ಯತೆ ಸ್ವರೂಪಗಳು
- ಅಧ್ಯಯನದ ಮಿತಿಗಳು
- ಸಮಾರೋಪ

ಗ್ರಂಥಸೂಚಿ

- ಮೂಲ ಆಕಾರ ಗ್ರಂಥಗಳು
- ಪರಾಮರ್ಶನ ಸಾಹಿತ್ಯ
- ಸಂಶೋಧನಾ ಗ್ರಂಥಗಳು
- ಪತ್ರಿಕೆಗಳು/ಲೇಖನಗಳು

ಪ್ರಸ್ತಾವನೆ

ಸಾಮಾನ್ಯವಾಗಿ ವ್ಯವಹಾರಕ್ಕಿಂತ ಬೇರೆಯಾದ ಯಾವುದೇ ಮಾತನ್ನು ಜನರು ಬಳಸುವಾಗ ಅದನ್ನು 'ತತ್ವ' ಎಂದು ಕರೆಯುತ್ತಾರೆ. 'ತತ್ವ' ಎಂಬುದಕ್ಕೆ ಭಿನ್ನವಾದ ನಡವಳಿಕೆ ಮತ್ತು ಅರ್ಥ ಇದೆ. ತತ್ವ ಒಂದು ವಾದ, ಇದಕ್ಕೆ ಗುರಿ ಮತ್ತು ಉದ್ದೇಶ ಇದೆ ಎಂದು ಪ್ರೊ.ಹಿ.ಶಿ.ರಾಮಚಂದ್ರೇಗೌಡರು ಅಭಿಪ್ರಾಯಿಸಿದರೆ, ತತ್ವ ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದು ಡಾ. ಬಸವರಾಜ ಸಬರದ ಅಭಿಪ್ರಾಯಪಟ್ಟಿದ್ದಾರೆ. 'ಪದ ಎಂಬುದನ್ನು 'ಹಾಡು' ಹದಗೊಂಡ ಶಬ್ದ ಎಂದು ಭಾವಿಸಲಾಗಿದ್ದರೂ ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎಂದು ಕರೆಯುತ್ತಾರೆ. 'ತತ್ವ' ವಸ್ತುವಾದರೆ 'ಪದ' ಅಭಿವ್ಯಕ್ತಿ ಮಾಧ್ಯಮ, ವಸ್ತು ಮತ್ತು ಅಭಿವ್ಯಕ್ತಿ ಇವರೆಡನ್ನೂ ಸಮನ್ವಯಗೊಳಿಸಿಕೊಂಡಿರುವ 'ತತ್ವಪದ', ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊಂದರ ಪ್ರತೀಕವು ಆಗಿದೆ, ಎಂಬುದಾಗಿ ಸಬರದ ಅವರು ಅಭಿಪ್ರಾಯಿಸುತ್ತಾರೆ.

ಶರಣರ ವಚನಗಳಂತೆ, ಹರಿದಾಸರ ಕೀರ್ತನೆಗಳಂತೆ ಅನುಭಾವಿ ಕವಿಗಳ ತತ್ವಪದಗಳು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದ್ದು, ಕನ್ನಡದಲ್ಲಿ ತತ್ವಪದ ಸಾಹಿತ್ಯಕ್ಕೆ ಒಂದು ದೀರ್ಘವಾದ ಪರಂಪರೆ ಇದೆ. ಆ ಪರಂಪರೆ ಹನ್ನೆರಡನೆಯ ಶತಮಾನದ ವಚನಕಾರರಿಂದ ಪ್ರಾರಂಭವಾಗಿದ್ದು, ಈ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖವಾದ ಘಟ್ಟಗಳನ್ನು ಗುರುತಿಸ ಬಹುದಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸಕಲೇಶ ಮಾದರಸ ಮುಂತಾದ ಶಿವಶರಣರಿಂದ ಪ್ರಾರಂಭಗೊಂಡ ಸ್ವರವಚನ ಸಾಹಿತ್ಯ ಮೊದಲನೆ ಹಂತ, ಹದಿನಾರನೆಯ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಜನಪ್ರಿಯವಾದ ತತ್ವಪದ ಎರಡನೇ ಹಂತ, ಹದಿನೆಂಟು ಹತ್ತೊಂಬತ್ತನೇ ಶತಮಾನದಲ್ಲಿ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗ ಶರಣ, ಕೈವಾರ ನಾರಾಯಣಪ್ಪ ಮುಂತಾದ ತತ್ವಪದಕಾರರಿಂದ ಜನಮನ ತಲುಪಿ ಜನಪದ ರೂಪ ಪಡೆದ ಮೂರನೆ ಹಂತವಾಗಿದೆ. ತತ್ವಪದ ಸಾಹಿತ್ಯ ಪರಂಪರೆಯು ನಮ್ಮ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಭಿವ್ಯಕ್ತಿಯ ವಿಸ್ತಾರವಾದ ಭಾಗವಾಗಿದ್ದು, ಇಲ್ಲಿ ಕೆಳವರ್ಗ ಮತ್ತು ಕೆಳಜಾತಿಗಳು ದೇಶದ ಸಂಸ್ಕೃತಿಗೆ ಸಾಹಿತ್ಯ, ತತ್ವಶಾಸ್ತ್ರ ಹಾಗೂ ಸಂಗೀತ ಕ್ಷೇತ್ರಗಳಿಗೆ ತಮ್ಮದೇ ಆದ ಮೀಮಾಂಸೆಗಳನ್ನು ಕಟ್ಟಿಕೊಟ್ಟಿದ್ದಾರೆ. ಒಂದು ನಾಡಿನ ಉದ್ದಗಲಕ್ಕೂ ವ್ಯಾಪಿಸಿರುವ ಈ ಪರಂಪರೆಯ ಅಭಿವ್ಯಕ್ತಿಯ ತತ್ವಪದಗಳು ಕನ್ನಡ ಸಾಹಿತ್ಯದ ಅತ್ಯಂತ ವಿಸ್ತಾರವಾದ ಭಾಗವೂ ಹೌದು. ವೈದಿಕ ಪರಂಪರೆಯ ತತ್ವಪದಕಾರರಲ್ಲಿ ಬ್ರಾಹ್ಮಣನಿಂದ ಹಿಡಿದು ಅಂತ್ಯಜನವರೆಗೆ ಎಲ್ಲರೂ ಕಂಡುಬರುತ್ತಾರೆ, ಕನ್ನಡ ಸಾಹಿತ್ಯದ ಯಾವ ಪ್ರಕಾರದಲ್ಲಿಯೂ ಈ ಪ್ರಮಾಣದಲ್ಲಿ ಸಾಹಿತ್ಯ ಸೃಷ್ಟಿಯಾಗಿಲ್ಲ. ಕರ್ನಾಟಕದ ಉದ್ದಗಲಕ್ಕೂ ಇವತ್ತಿಗೂ ಜೀವಂತವಾಗಿರುವ

ಪರಂಪರೆಯೆಂದರೆ ಅದು ತತ್ವಪದಕಾರರ ಪರಂಪರೆಯಾಗಿದ್ದು, ತತ್ವಪದ ಎಂಬ ಪರಿಭಾಷೆಯಲ್ಲಿಯೇ ತತ್ವ(ದರ್ಶನ), ಹಾಗೂ ಪದದ(ಹಾಡಿಕೆಯ) ಉಲ್ಲೇಖವಿದೆ. ತತ್ವಪದಕಾರರು ಆಯಾ ಪ್ರದೇಶದ ಉಪಭಾಷೆ ಮತ್ತು ನುಡಿಗಟ್ಟುಗಳಲ್ಲೇ ಹಾಡು ಕಟ್ಟಿದವರು.

ಹೊಸಗನ್ನಡ ಅರುಣೋದಯವನ್ನು ಕೆಂಪುನಾರಾಯಣನಿಂದ, ಮುದ್ದಣ್ಣರಿಂದ ಆರಂಭಿಸುವುದನ್ನು ಕೈ ಬಿಟ್ಟು, ಹೊಸಗನ್ನಡದ ಸಾಹಿತ್ಯ ಪ್ರಾರಂಭವನ್ನು ತತ್ವಪದಕಾರರಿಂದ ಪ್ರಾರಂಭಿಸಬೇಕಾಗಿದೆ ಎಂದು ಕಿ.ರಂ. ನಾಗರಾಜುರವರು ಅಭಿಪ್ರಾಯಪಡುತ್ತಾರೆ. ಕಿ.ರಂ. ಅವರ ಅಭಿಪ್ರಾಯಕ್ಕೆ ಭಿನ್ನವಾಗಿ ತತ್ವಪದ ಅಥವಾ ಭಜನೆ ಸಾಹಿತ್ಯವನ್ನು ಜಾನಪದ ಸಾಹಿತ್ಯ ಪರಂಪರೆಗೆ ಸೇರಿಸಬೇಕಾಗುತ್ತದೆ ಎಂದು ಅನೇಕ ಜಾನಪದ ವಿದ್ವಾಂಸರು ತಿಳಿಸಿದ್ದಾರೆ. ತತ್ವಪದ ಸಾಹಿತ್ಯವು ಶಿಷ್ಟ ಹಾಗೂ ಜನಪದ ಎರಡೂ ಸಾಹಿತ್ಯ ಪರಂಪರೆಗೆ ಸೇರಿದ್ದಾಗಿದ್ದು, ಧರ್ಮ, ಭಾಷೆ ಮತ್ತು ಪ್ರಾದೇಶಿಕ ಸಮನ್ವಯವನ್ನು ಸಾಧಿಸಿದೆ. ಈ 'ತತ್ತ್ವ' ಪ್ರೌಢವಾದುದೂ ಶಿಷ್ಟಪರಂಪರೆಗೆ ಸೇರಿದುದಾಗಿದ್ದರು, ಇದರ ಅಭಿವ್ಯಕ್ತಿಯ ಕ್ರಮ ಜನಪದವಾಗಿದೆ.

೧೭, ೧೮, ೧೯ ನೇ ಶತಮಾನಗಳ ಕಾಲವೆಂದರೆ ಅರಜಕತೆಯ ಕಾಲವು ಹೌದು, ತತ್ವಪದಗಳ ಸುವರ್ಣಯುಗವು ಹೌದು. ರಾಜಕೀಯವಾಗಿ ಸ್ಥಿರತೆ ಇಲ್ಲದ ಕಾಲ 'ನಿರಂತರವಾದ ರಾಜಕೀಯ ತಂತ್ರಗಳು ಮತ್ತು ದೈಹಿಕ ಬಲ ಇವುಗಳನ್ನು ಎಲ್ಲಾ ಪಕ್ಷಗಳು ತಮ್ಮ ವಿರೋಧಿಗಳನ್ನು ಅಡಗಿಸಲು ಬಳಸುತ್ತಿದ್ದವು ಪರಿಣಾಮವಾಗಿ ಇಡೀ ದೇಶವೇ ಕುದಿಯುವ ಕುಲುಮೆಯಾಗಿತ್ತು. ದೇಶವಿಡೀ ರಣಭೂಮಿಯಾಗಿ ಪರಿವರ್ತನೆಗೊಂಡು ಒಂದಿಷ್ಟು ಸ್ಥಳವೂ ಶಾಂತಿ ನೆಮ್ಮದಿಗಾಗಿ ಉಳಿಯದಂತಾಗಿತ್ತು. ಈ ಪಕ್ಷಗಳಿಗೆ ಅವರು ಮರಾಠ, ನಿಜಾಮ, ಫ್ರೆಂಚ್, ಇಂಗ್ಲೀಷ್, ಅಥವಾ ಹೈದರ್ ಆಗಲಿ ಮುಖ್ಯ ವರಮಾನ ಮೂಲವೆಂದರೆ ಯುದ್ಧ ವಿಜಯಗಳಿಂದ ದೊರಕುವ ಫಲ ಯಾರಾದರೊಬ್ಬರು ಶಾಂತಿಯಿಂದ ಇರಬಯಸಿದರೂ, ಮಿಕ್ಕವರು ಆ ಸುಖವನ್ನು ಸವಿಯಲು ಅವರನ್ನು ಬಿಡುತ್ತಿರಲಿಲ್ಲ. ಇಂತಹ ಕಾಲದಲ್ಲಿ ತತ್ವ ಪದಕಾರರು ಜನಸಮುದಾಯಗಳ ನಡುವಿದ್ದು ಬದುಕುವ ಛಲ ತುಂಬುವುದರ ಜೊತೆಗೆ ಬಡತನವವನ್ನು ಅನುಭಾವದ ನೆಲೆಯಲ್ಲಿ ವೈಭವೀಕರಿಸಿದ್ದು ನಿಜ, ಎಲ್ಲಾ ಬಗೆಯ ಪ್ರಭುತ್ವ, ಶ್ರೀಮಂತಿಕೆಯನ್ನು ಹೆಣದ ವಾಸನೆಗೆ ಹೋಲಿಸಿ ನಿಂತು, ಜನಸಮುದಾಯಗಳು ತತ್ವಪದಕಾರರನ್ನೂ ಅವರ ಪದಗಳನ್ನು ತಮ್ಮ ನಿತ್ಯ ಬದುಕಿನ ಬವಣೆಗಳನ್ನು ಮೀರಲು ಬಳಸಿಕೊಂಡು ಬೆನ್ನುಹತ್ತಿದರು. ಎಲ್ಲ ಕೆಳಜಾತಿ-ಮತಗಳ ಜನರು ಕೂಡಿ ಭಜನೆ ಮಾಡುವ ಪರಂಪರೆ ಹೆಚ್ಚು ಬಲಗೊಂಡದ್ದು ಈ ಕಾಲದಲ್ಲಿಯೆ. ಅರಾಜಕತೆ, ಬೇಗುದಿ ತುಂಬಿದ ಸಮಾಜದಲ್ಲಿ ಸಾಮೂಹಿಕ ಭಜನೆಗಳು ಜನರ ನೆಮ್ಮದಿಗೆ ದಾರಿ ಮಾಡಿದವು.

ಜೀವ, ಜಗತ್ತು, ಸಂಸಾರ, ಹೆಣ್ಣು, ಹೊನ್ನು, ಮಣ್ಣು, ಹುಟ್ಟು, ಸಾವು, ಮೋಕ್ಷ ಇವುಗಳ ನಡುವೆ ಬದುಕಿನ ಮೌಲ್ಯಗಳು ಹೇಗೆ ರೂಪುಗೊಳ್ಳಬೇಕೆಂಬುದನ್ನು ತತ್ವಪದಗಳು ಸಾರಿ ಹೇಳುತ್ತವೆ. ತತ್ವಪದಕಾರರಿಗೆ ಧರ್ಮದ ಎಲ್ಲೆಗಳನ್ನು ಮೀರಿದ ವಿಶ್ವಮಾನವ ಪ್ರಜ್ಞೆಯನ್ನು ಹೊಂದಿರುವ ತತ್ವಪದಕಾರರಲ್ಲಿ ಲಿಂಗ ಅಸಮಾನತೆಗೆ ಸ್ಥಳವಿಲ್ಲ.

ಆದರೆ ಅವರಲ್ಲಿ ಗುಪ್ತವಾಗಿ ಇರಬಹುದಾದ 'ಸಾಧನೆಯಲ್ಲಿನ ಹೆಣ್ಣು' ಬಹಳ ಸಾರಿ ಮುದ್ರಿಕೆಯಾಗಿ ಬಳಕೆಗೊಂಡಂತಿದೆ. ಈ ಪಂಥವು ಹೆಣ್ಣು ಮೋಕ್ಷದ ಸಾಧನೆಯಲ್ಲಿ ಸಮಾನ ಅರ್ಹಳೆಂದು ಭಾವಿಸುತ್ತದೆ. ತತ್ವಪದಕಾರರದ್ದು ಪ್ರಜಾಸತ್ತಾತ್ಮಕವಾದ ಜೀವನ ಕ್ರಮ, ಇಲ್ಲಿ ಕೆಳ ಸ್ತರದ ಹೆಣ್ಣುಮಕ್ಕಳೂ ಗುರು ಸ್ಥಾನವನ್ನು ಪಡೆಯುತ್ತಾರೆ. ಯಾವುದೇ ರೀತಿಯ ತಾರತಮ್ಯವಿಲ್ಲ ಅನೇಕ ಚಿಂತನಾ ಪ್ರಸ್ಥಾನಗಳ ತತ್ವ ಜಿಜ್ಞಾಸೆ ನಡೆದರೂ ಇಲ್ಲಿ ಎಲ್ಲರೂ ಸಮಾನರು. ತತ್ವಪದ ಸಾಹಿತ್ಯವು ಮಹಿಳೆಗೆ ನೀಡಿದ ಸ್ಥಾನಮಾನ ವಚನ, ಕೀರ್ತನ ಸಾಹಿತ್ಯಕ್ಕೆ ಹೋಲಿಸಿದಾಗ ಉತ್ತಮವಾಗಿದ್ದು, ಕೆಲವು ತತ್ವಪದಕಾರರು ಮಹಿಳೆ ಕುರಿತು ದ್ವಂದ್ವ ನಿಲುವಿನಲ್ಲಿ ತತ್ವಪದಗಳನ್ನು ರಚಿಸಿದ್ದಾರೆ, ಉದಾಹರಣೆಗೆ ಶರೀಫರ ಪದಗಳನ್ನು ಗಮನಿಸಿದಾಗ ಅವರು ಕೌಟುಂಬಿಕ ಜೀವನದಲ್ಲಿರುವಾಗ ಸಂಸಾರ, ಮಡದಿ, ಮಕ್ಕಳ ಕುರಿತಂತೆ ಮಹಿಳಾಪರ ಪದಗಳನ್ನು ಹಾಡಿದರೆ, ವಿಧಿಯ ಆಟದಲ್ಲಿ ತನ್ನ ಕುಟುಂಬದವರನ್ನು ಕಳೆದುಕೊಂಡಾಗ 'ಸಂಸಾರ ಸ್ಥಿರವಲ್ಲವೊ' ಎಂದು ಹಾಡಿ ಮಾನಿನಿ ತಲೆಬರಹದ ಅಡಿಯಲ್ಲಿ ಮಹಿಳೆಯನ್ನು ರೂಪಕವಾಗಿಸಿ ಸಮಾಜಕ್ಕೆ ವಿವೇಚನೆ ನೀಡುವ ಎಚ್ಚರಿಕೆ ಗಂಟೆಯ ಪದಗಳನ್ನು ಹಾಡಿದ್ದಾರೆ.

ಶರಣರ ವಚನ, ಹರಿದಾಸರ ಕೀರ್ತನೆಗಳಂತೆ, ತತ್ವ ಪದಕಾರರ ತತ್ವ ಪದಗಳು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿ ಪರಿಗಣಿಸಬಹುದು, ಇವು ವಚನಗಳು ಹಾಗೂ ಕೀರ್ತನೆಗಳಂತೆ ಸರಳವೂ ಆಗಿದ್ದು; ಭಕ್ತ ತಾಳಿದ ಭಕ್ತಿ, ಶ್ರದ್ಧೆ, ಚಿಂತನೆ, ಧ್ಯಾನಾದಿ ಆಧ್ಯಾತ್ಮಿಕ ಅನುಭಾವದ ಬಗೆಯಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ವರ್ಣಿತವಾಗಿರುವುದನ್ನು ಕಾಣುವೆವು. ಪರಮಾತ್ಮನ ಬಗೆಗಿನ ಅನುಭವ ಈ ಪದ್ಯಗಳಲ್ಲಿ ವ್ಯಕ್ತಗೊಂಡಿರುವುದರಿಂದ ಇವಕ್ಕೆ 'ಅನುಭವಪದ'ಗಳೆಂದೂ, ಇವನ್ನು ಏಕತಾರಿಯಂತಹ ವಾದ್ಯಗಳೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವಕ್ಕೆ 'ಸ್ವರವಚನ'ಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು, ಆಧ್ಯಾತ್ಮಿಕ ತತ್ವಗಳನ್ನು ಇವು ಒಳಗೊಂಡಿರುವುದರಿಂದ ಇವಕ್ಕೆ 'ತತ್ವಪದಗ'ಳೆಂದೂ, ಇವನ್ನು ಜನ ಸಾಮಾನ್ಯರು ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಇವಕ್ಕೆ 'ಭಜನೆಯ ಹಾಡು'ಗಳೆಂದು ಕರೆದುದುಂಟು. ಒಟ್ಟಿನಲ್ಲಿ ಇವು ಪರಮಾತ್ಮನ ಸ್ವರೂಪವನ್ನು ಅರಿಯಲು ಸಹಾಯಕವಾಗುವಂಥವಾಗಿದ್ದೂ, ಭಕ್ತಿ ಸಾಧನೆಯಲ್ಲಿ ತೊಡಗಿದ ಜೀವಾತ್ಮನ ಅಂತರಂಗದ ಕರೆಯೇ ಇವುಗಳ ವಸ್ತು. ಭಕ್ತನ ಆತ್ಮಾನುಭವಕ್ಕೆ ಇವು

ಸಂಬಂಧಿಸಿದುದರಿಂದ ಇವಕ್ಕೆ ಕೈವಲ್ಯ ಪದಗಳೆಂದು ಕರೆದಿದ್ದಾರೆ. ಕನ್ನಡದಲ್ಲಿ ತತ್ವಪದಗಳನ್ನು ಶರಣರು ಪ್ರತಿಪಾದಿಸಿದ ಮಾರ್ಗದಲ್ಲಿ ನಡೆದ ಅನುಭಾವಿಗಳು ಅವರು ಸಂಸಾರದಲ್ಲಿದ್ದ್ಯೋ, ವಿರಾಗಿಗಳಾಗಿದ್ದ್ಯೋ, ಮಠಾಧಿಪತಿಗಳಾಗಿಯೋ, ಆರೂಢಮಾರ್ಗಿಗಳಾಗಿಯೋ ಇದ್ದು ರಚಿಸಿದವರಾಗಿದ್ದಾರೆ.

ಕನ್ನಡ ಸಾಹಿತ್ಯದ ಅನುಭಾವ ಪರಂಪರೆಯಲ್ಲಿ ವಚನ, ಸ್ವರವಚನ, ಕೀರ್ತನೆ ಮತ್ತು ತತ್ವಪದಗಳು ವಿಭಿನ್ನ ಆಶಯಗಳೊಂದಿಗೆ ಬೆಳೆದು ಬಂದಿದ್ದೂ, ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಪ್ರಭಾವದಿಂದ ಮುಂದೆ ಸ್ವರವಚನಗಳೂ ಬೆಳೆದು ಬಂದಿದನ್ನು ನಾವು ಕಾಣಬಹುದು. ವಚನಗಳ ಸಮಾಜಮುಖಿಯ ಆಯಾಮ, ಕೀರ್ತನೆಗಳ ಭಕ್ತಿಯ ಆಯಾಮ, ಸ್ವರವಚನಗಳ ಅನುಭಾವಿಕ ಆಯಾಮಗಳು ಸೇರಿಕೊಂಡೂ 'ತತ್ವಪದ' ಎಂಬ ಅನುಭವ ಪರಂಪರೆಯೊಂದು ಹುಟ್ಟಲು ಕಾರಣವಾಯಿತು. ಪ್ರಭಾವ, ಪ್ರೇರಣೆಯ ನೆಲೆಯಿಂದ ತತ್ವಪದಗಳನ್ನು ಅವಲೋಕಿಸಿದಾಗ, ವಚನಗಳ ಪ್ರಭಾವವೆ ಮುಖ್ಯವಾಗಿರುವುದನ್ನು ಕಾಣುತ್ತೇವೆ.

ಸೂಫಿ ಮತ್ತು ತತ್ವಪದ ಸಾಹಿತ್ಯದ ಸಂಬಂಧ ತಾತ್ವಿಕ ಆಯಾಮದ್ದು, ಮುಸ್ಲಿಂ ಧರ್ಮದ ಆನುಭಾವಿಕ ಪಂಥವಾಗಿ ಮಧ್ಯಕಾಲೀನ ಭಾರತದಲ್ಲಿ ಬೆಳೆದುಬಂದ ಸೂಫಿ ಸಂತಪರಂಪರೆಯು ೧೭, ೧೮, ೧೯ನೇ ಶತಮಾನಗಳ ಸಂದರ್ಭದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಪ್ರಭಾವವನ್ನು ಬೀರಿದ್ದೂ, 'ಖ್ವಾಜಾಬಂದೇನವಾಜ್'ರವರು ಗುಲಬರ್ಗಾದ ಶರಣಬಸವೇಶ್ವರರ ಜೊತೆ ಸೇರಿಕೊಂಡು 'ಕೋಮುಸಾಮರಸ್ಯ' ಪರಂಪರೆಯನ್ನು ಹುಟ್ಟುಹಾಕಿದರೆ, ಆ ಭಾಗದಲ್ಲಿ ರಚನೆಯಾದ ತತ್ವಪದಗಳು ಸೂಫಿ ತತ್ವ ಮತ್ತು ವಚನ ತತ್ವ ಎರಡನ್ನೂ ಪ್ರೇರಕವಾಗಿರಿಸಿಕೊಂಡು, 'ಸಮನ್ವಯ ಸಾಹಿತ್ಯ ಪರಂಪರೆಯನ್ನು 'ತತ್ವಪದ'ಗಳ ಹೆಸರಿನಲ್ಲಿ ಹುಟ್ಟು ಹಾಕುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದವು. ಈ ಕುರಿತು ಪೂರ್ಣಪ್ರಮಾಣದ ವಿಷಯವನ್ನು ಮಹಾಪ್ರಬಂಧದಲ್ಲಿ ಮತ್ತಷ್ಟು ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ಅಕ್ಕಮಹಾದೇವಿ, ಜ್ಞಾನಬಾಯಿ, ಮೀರಾಬಾಯಿ, ಅಂಡಾಳ ಲಲ್ಲಾದೇವಿ, ಮುಂತಾದ ಮಹಿಳೆಯರು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿ ಸ್ತ್ರೀಪರ ಚಿಂತನೆಗಳಿಗೆ ಅವಕಾಶ ಮಾಡಿಕೊಟ್ಟರು. ಈ ಕಾಲುದಾರಿಯಲ್ಲಿಯೇ ಸಂತರು ಹೆಣ್ಣು-ಗಂಡಿನ ತಾರತಮ್ಯವನ್ನು ವಿರೋಧಿಸಿ ಸಮಾನತೆಯ ನೆಲೆಯಲ್ಲಿ ತತ್ವಪದಗಳನ್ನು ರಚಿಸಿದ್ದಾರೆ. ತತ್ವಪದಗಳಲ್ಲಿ ಮಹಿಳೆಯನ್ನು ಕೇಂದ್ರೀಕರಿಸಿ ಇದುವರೆಗೂ ಅಧ್ಯಯನಗಳು ನಡೆಯದ ಕಾರಣ ತತ್ವಪದಕಾರ\ತತ್ವಪದಕಾರ್ತಿಯರ ತತ್ವಪದಗಳಲ್ಲಿ ಮಹಿಳೆಯ ಸಂವೇದನೆ ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಮಾನವನ ಅತ್ಯಂತ ಪ್ರಾಥಮಿಕ ಸಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ ಪ್ರಾಯಶಃ ಹೆಚ್ಚಿನ ಮಹತ್ವವಿದ್ದಿರಬೇಕು. ಏಕೆಂದರೆ ಮೊಲೆಯುಣಿಸುವ ಕಾರಣದಿಂದಾಗಿ ಮಗುವಿಗೆ ತಾಯಿ ಅತ್ಯಂತ

ಆತ್ಮೀಯಳೂ ಪ್ರಮುಖಳೂ ಆದ ವ್ಯಕ್ತಿಯಾಗುವುದರಿಂದಾಗಿ ಹೆಣ್ಣು ಮಹತ್ವಪೂರ್ಣಳಾಗುತ್ತಾಳೆ. ಮಗು-ತಂದೆಯ ಸಂಬಂಧ ಪರೋಕ್ಷವಾದುದರಿಂದಾಗಿ ಗಂಡಸಿನ ಪಾತ್ರ ಕುಟುಂಬ ವ್ಯವಸ್ಥೆಯಲ್ಲಿ ಕೂಡ ಮೊದಮೊದಲು ಗೌಣವಾಗಿತ್ತು. ಇಂತಹ ಸ್ಥಿತಿಯಿಂದ ಬರಬರುತ್ತಾ ಬಸುರಿಯ ಸಮಯದಲ್ಲಿ ಹಾಗೂ ಹೆರಿಗೆಯ ಸಂದರ್ಭದಲ್ಲಿ ಹೆಂಡತಿಯ ಜೊತೆಗಿರುವ ಗಂಡನಲ್ಲಿ ಮಗುವಿನ ಬಗೆಗೆ ವಾತ್ಸಲ್ಯವುಂಟಾಗುತ್ತದೆ. ಇದೇ ಪಿತೃತ್ವ ಕಲ್ಪನೆಯ ಮೂಲವೆಂದು ಮಾಲಿನವೋಸ್ಕಿ ಅಭಿಪ್ರಾಯ ಪಡುತ್ತಾರೆ. ಇಂತಹ ಪರಿಕಲ್ಪನೆಯು ಶಾರೀರಿಕವಾಗಿ ಪಿತೃತ್ವವನ್ನು ಗುರುತಿಸಲು ಕಾರಣವಾಗಿ ಪಿತೃಯಾಜಮಾನ್ಯ ಕುಟುಂಬಗಳ ನಿರ್ಮಾಣಕ್ಕೆ ಮೂಲವಾಯಿತು.

ಬರ್ಟ್ರಂಡ್ ರಸೆಲ್ ಪಿತೃಯಾಜಮಾನ್ಯ ಕುಟುಂಬಗಳು ನೆಲೆಯೂರಲು ಮೂರು ಪ್ರಮುಖ ಕಾರಣಗಳನ್ನು ಪಟ್ಟಿಮಾಡುತ್ತಾರೆ. ಮೊದಲನೆಯದು-ಮಗುವಿನ ಮೇಲಿನ ಅವನ ಮೋಹ, ಆರ್ಥಿಕ ಉದ್ದೇಶಗಳಿಗೆ ಹೆಚ್ಚಾಗಿ ಗಂಡುಮಕ್ಕಳನ್ನೆ ಬಯಸುತ್ತಿದ್ದುದ್ದು-ಎರಡನೇ ಕಾರಣ ಮೂರನೆಯದಾಗಿ-ಧಾರ್ಮಿಕ ಭಾವನೆಯು ತಂದೆಯ ಶ್ರೇಷ್ಠತ್ವದ ಕಲ್ಪನೆಯನ್ನು ಪಡೆದಿರುವುದರಿಂದ ಅಧಿಕಾರಿಶಾಹಿಯನ್ನು ಮತವು ಬೆಂಬಲಿಸುವಂತಾಯಿತು. ಹೀಗಾಗಿ ಎಲ್ಲ ದೃಷ್ಟಿಗಳಿಂದ ಗಂಡಸಿಗೆ ಪ್ರಾಮುಖ್ಯ ದೊರೆತು ಸಮಾಜರಚನೆ ಸಂಕೀರ್ಣವಾದಂತೆಲ್ಲ ಹೆಣ್ಣು ಕಡೆಗಣಿಸಲ್ಪಟ್ಟಳು.

ಭಾರತದ ಹೆಣ್ಣಿನ ಪರಿಸ್ಥಿತಿಯೂ ಇದೇ ರೀತಿಯಾಗಿ ಕ್ಷೀಣಿಸುತ್ತ ಬಂದಿದೆ. ಭಾರತದ ಮೂಲನಿವಾಸಿಗಳ ಸಂಸ್ಕೃತಿಯಾದ ಸಿಂಧೂ ಕಣಿವೆಯ ಕಾಲದಲ್ಲಿನ ಅವಶೇಷಗಳನ್ನು ಗಮನಿಸಿದರೆ. ಅಲ್ಲಿನ ಸ್ತ್ರೀವಿಗ್ರಹಗಳು ಬಾಹುಳ್ಯವು ಆ ಕಾಲದಲ್ಲಿ ಸ್ತ್ರೀಯರಿಗಿದ್ದ ಪ್ರಾಮುಖ್ಯದ ಪ್ರತೀಕ ಹಾಗೂ ಆ ಕಾಲದ ಕುಟುಂಬ ಪ್ರಾಚೀನ ಈಜಿಪ್ಟ್‌ನ ರೀತಿಯಲ್ಲಿ ಸ್ತ್ರೀಯಾಜಮಾನ್ಯದ ಕುಟುಂಬವಾಗಿದ್ದಿತೆಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಇಂಡೋ-ಆರ್ಯನ್ ಸ್ತ್ರೀ ಕತೆಯೆಂದರೆ ಮುಕ್ತ ಪ್ರೇಮದ ಸಮಾಜ ವ್ಯವಸ್ಥೆಯಿಂದ ಆರಂಭಗೊಂಡು, ಮಧ್ಯಯುಗಗಳಲ್ಲಿ ತನ್ನೆಲ್ಲಾ ಸ್ವಂತಿಕೆಯನ್ನೂ ಕಳೆದುಕೊಂಡಿದ್ದಲ್ಲದೆ, ಗಂಡನೊಡನೆ ಚಿತೆಯೇರುವುದರೊಂದಿಗೆ ಮುಕ್ತಾಯಗೊಳ್ಳುವ ದುರಂತತೆಯೆಂದು ವಿದ್ವಾಂಸರು ವರ್ಣಿಸುತ್ತಾರೆ.

ಋಗ್ವೇದ ಕಾಲದ ಆರ್ಯರಲ್ಲಿ ಜಟಿಲ ಧಾರ್ಮಿಕ ಆಚರಣೆಗಳೇನೂ ಇರಲಿಲ್ಲ. ಐಹಿಕ ಸುಖವನ್ನು ಸಾಧ್ಯವಾದಷ್ಟು ಸವಿಯಲು ಆಸೆಯಿದ್ದ ಅವರಿಗೆ ಹೆಣ್ಣು ಎಂದರೆ ಜೀವನದ ಸಹಭಾಗಿಗಳೆಂಬ ನಂಬಿಕೆಯಿತ್ತು. ಆಗ ಬಾಲ್ಯವಿವಾಹಗಳೇ ಇರಲಿಲ್ಲ. ಮದುವೆಯಾದ ನಾಲ್ಕನೇಯ ದಿನದಂದು ಗಂಡು-ಹೆಣ್ಣಿನ ಸಮಾಗಮವಾಗಬೇಕೆಂಬ ಸೂಚನೆ ಅಲ್ಲಿರುವುದರಿಂದ ಮದುವೆಯಾಗುವ ಹೆಣ್ಣು ಪ್ರಾಪ್ತ ವಯಸ್ಕಳಾಗಿರುತ್ತಿದ್ದಳು. ಗಂಡ ಸತ್ತರೆ, ವಿಧವಾ ವಿವಾಹವಾಗುವ ರೂಢಿ ಈ ಕಾಲದಲ್ಲಿತ್ತು.

ಆ ಕಾಲದ ಹೆಂಗಸು ಬೌದ್ಧಿಕ–ಧಾರ್ಮಿಕ ಕ್ರಿಯೆಗಳಲ್ಲಿ ಘೋಷಾ, ಇಂದ್ರಾಣಿ, ಶಚೀ ಮುಂತಾದ ಸ್ತ್ರೀಯರು ಋಗ್ವೇದದ ಕೆಲವು ಮಂತ್ರಗಳನ್ನು ರಚಿಸಿದರೆಂದು ವಿದ್ವಾಂಸರು ಹೇಳುತ್ತಾರೆ. ಮುಕ್ತ ಪ್ರೇಮದ ವರನಾರಿಯನ್ನು ಆಗಿನ ಸಮಾಜ ಕೀಳಾಗಿ ಕಾಣುತ್ತಿರಲಿಲ್ಲ ಅಲ್ಲದೆ, ವಿವಾಹವು ಹೆಣ್ಣಿಗೆ ನಿರ್ಬಂಧವಾಗಿಯೂ ಇರಲಿಲ್ಲ. ಆದರೆ ವಿವಾಹೇತರ ಸಂತಾನವನ್ನು ಆಗಲೂ ಅನಿಷ್ಟವೆಂದು ಭಾವಿಸಲಾಗುತ್ತಿತ್ತು.

ಮುಂದೆ ವೇದಗಳ ಕಾಲದಲ್ಲಿ ಸ್ತ್ರೀಯ ಪರಿಸ್ಥಿತಿ ದಿನೆ ದಿನೇ ಕಠಿಣವಾಗತೊಡಗಿತು. ಆದರೆ ಗೃಹಸೂತ್ರಗಳ ವೇಳೆಗೆ ವಿವಾಹದ ಅತ್ಯಂತ ಮುಖ್ಯಭಾಗವಾದ 'ಸಪ್ತಪದಿ' ರೂಢಿಗೆ ಬಂದಿತು. ಸಪ್ತಪದಿಯ ನಂತರ ವರನು ವದುವಿಗೆ ಈ ರೀತಿ ಹೇಳುತ್ತಾನೆ. 'ಮಮವ್ರತೇ ತೇ ಹೃದಯಂ ದದಾನಿ, ಮಮಚಿತ್ತಂ ಅನುಚಿತ್ತಂ ತೇ ಅಸ್ತು' ನಿನ್ನ ಹೃದಯವನ್ನು ನನ್ನ ಹೃದಯದಲ್ಲಿ ಧರಿಸುತ್ತೇನೆ. ನಿನ್ನ ಚಿತ್ತವು ನನ್ನ ಚಿತ್ತವನ್ನು ಅನುಸರಿಸಲಿ, ಈಗಲೂ ಸಪ್ತಪದಿಯೇ ಮದುವೆಯ ಮುಖ್ಯವಿಧಿ. 'ನಿನ್ನ ಚಿತ್ತವು ನನ್ನ ಚಿತ್ತವನ್ನು ಅನುಸರಿಸಲಿ ಎಂದು ಹೇಳುವುದರ ಮೂಲಕ ಗಂಡು ಹೆಣ್ಣನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಹೆಣ್ಣಿನ ಮಾಸಿಕ ಋತುವಿನಿಂದಾಗಿ ಅವಳನ್ನು ಅಪವಿತ್ರಳೆಂದು ಭಾವಿಸಲಾಯಿತು. ಅವಳ ಮೈಲಿಗೆಯ ಕಾರಣದಿಂದಾಗಿ ವೇದವಿದ್ಯೆಯಿಂದ ಸ್ತ್ರೀ ವಂಚಿತಳಾದಳು. ಹಾಗೆ ಹೆಣ್ಣನ್ನು ಶೂದ್ರನಿಗೆ ಸಮಾನವೆಂದು ಭಾವಿಸಿದರು.

ಹೆಣ್ಣು ತನಾಗಿಯೇ ಯಾವುದೇ ಯಜ್ಞ ಅಥವಾ ವ್ರತಗಳನ್ನು ಮಾಡಲು ಅರ್ಹಳಲ್ಲ, ಪತಿ ಶುಶ್ರೂಶೆಯಿಂದಲೇ ಆಕೆಯು ಸ್ವರ್ಗದಲ್ಲಿ ಮನ್ನಣೆಯನ್ನು ಪಡೆಯುತ್ತಾಳೆ ಎಂದು ಮನು ಹೇಳಿ ವಿವಿಧ ಕಟ್ಟಳೆಯೋಳಗೆ ಮಹಿಳೆಯನ್ನು ಸಿಲುಕಿಸಿದ. ಮನುಸ್ಮೃತಿಯಲ್ಲಿ ಬಾಲ್ಯವಿವಾಹ, ಪಾತಿವ್ರತ್ಯದ ಕಠಿಣ ನಿಯಮಗಳು, ವಿಧವಾ ವಿವಾಹದ ನಿಷೇದದ ಕಾನೂನುಗಳನ್ನು ತಂದು ಭಾರತೀಯ ಮಹಿಳೆಯರ ಸ್ವತಂತ್ರವನ್ನು ಕಸಿದುಕೊಂಡನು.

ಜೈನ ಮತ್ತು ಬೌದ್ಧಮತದ ಕಾಲದಲ್ಲಿ ಸ್ತ್ರೀಗೆ ಉತ್ತಮ ಸ್ಥಾನವನ್ನು ಕೊಡಲಾಗಿತ್ತು ಎಂದು ಮೇಲು ನೋಟಕ್ಕೆ ಕಂಡರು ಜೈನ ಧರ್ಮಶಾಸ್ತ್ರ ಲೇಖಕರು ಮುನಿಗಳಾಗಿದ್ದು ಬ್ರಹ್ಮಚರ್ಯ ಜೀವನಕ್ಕೆ ಅತ್ಯಂತ ಮಹತ್ವವಿದ್ದರಿಂದ, ವೈದಿಕರಂತೆ ಸ್ತ್ರೀಯರನ್ನು ಸಾಧನೆಗೆ ಅಡ್ಡಿಯೆಂದು ಭಾವಿಸಿದರು.

ಬೌದ್ಧಧರ್ಮವು ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರವನ್ನು ನೀಡಿತ್ತು. ಪುರುಷ ಸ್ತ್ರೀ ಇಬ್ಬರು ಜೀವನದ ಉನ್ನತ ಮಟ್ಟವನ್ನು ತಲುಪಬಹುದಿತ್ತು. ಬುದ್ಧನು ಭಿಕ್ಕುಣಿಯ ಸಂಘ ಸ್ಥಾಪನೆಗೆ ಅವಕಾಶ ನೀಡಿ ಅವರು ಎಲ್ಲ ವರ್ಗದ ಮಹಿಳೆಯರಿಗೆ ವಿವಾಹಿತರು ಅವಿವಾಹಿತರು, ವಿಧವೆಯರು ಹಾಗು ವ್ಯಭಿಚಾರೀ ಮಹಿಳೆಯರಿಗೂ ತನ್ನ ಮಾರ್ಗವನ್ನು ತೆರೆದಿಟ್ಟರು. ಈ ಅವಧಿಯಲ್ಲಿ ಭಾರತದ ಎಲ್ಲೆಡೆ ಸತಿಪದ್ಧತಿ,

ಬಾಲ್ಯವಿವಾಹ ಮುಂತಾದ ದುಷ್ಟಪದ್ಧತಿಗಳನ್ನು ನಿಲ್ಲಿಸಿತು ಎಂದು ಪಿ ಥಾಮಸ್ ಅಭಿಪ್ರಾಯಪಟ್ಟಿದ್ದಾರೆ. ಕ್ರೈಸ್ತ ಧರ್ಮವು ದೈವಸಾಕ್ಷಾತ್ಕರದ ವಿಷಯದಲ್ಲಿ ಹೆಣ್ಣು-ಗಂಡುಗಳು ಸಮಾನರೆಂದು ಭಾವಿಸಿದ್ದರು.

ಪಾಶ್ಚಾತ್ಯರಲ್ಲಿಯೂ ಹೆಣ್ಣು ಎರಡನೇ ದರ್ಜೆವಳಾಗಿಯೇ ಇದ್ದಾಳೆ ಪ್ಲೇಟೋ ಸ್ತ್ರೀಯರ ಬಗ್ಗೆ ಗೌರವ ಇಟ್ಟಿದ್ದು ತನ್ನ ಅಕಾಡೆಮಿಯಲ್ಲಿ ಕೆಲವು ಹೆಣ್ಣು ಮಕ್ಕಳಿಗೆ ತತ್ವಶಾಸ್ತ್ರ ಕಲಿಯಲು ಅವಕಾಶ ನೀಡಿದ್ದನು. ಸೆನೆಕನೂ ಹೆಣ್ಣಿನ ತ್ವಾತ್ವಿಕ ನೆಲೆಯಲ್ಲಿ ನಂಬಿಕೆಯಿಟ್ಟಿದ್ದನು. ಅರಿಸ್ಟಾಟಲ್ ಹೆಣ್ಣು ಗಂಡಸಿಗಿಂತ ಕಡಿಮೆ ಪರಿಪೂರ್ಣಳಾಗಿರುವುದರಿಂದ ವಿಧೇಯತೆಯಿಂದ ಗಂಡಸನ್ನು ಅನುಸರಿಸುವುದೇ ಅವಳಿಗೆ ಶ್ರೆಯಸ್ಕವೆಂದು ಭಾವಿಸಿದ್ದನು.

ಮಹಿಳಾವಾದಿ ಚಿಂತನೆಗಳು ವಚನಕಾರರ ಚಳುವಳಿಯಿಂದ ಸಮಾಜದಲ್ಲಿ ಎಲ್ಲ ರೀತಿಯ ಅಸಮಾನತೆಗಳನ್ನು ಪ್ರಶ್ನಿಸಿ ಮಹಿಳೆಯ ಬದುಕಿಗೆ ಹೊಸ ಆಯಾಮ ಕಲ್ಪಿಸಿಕೊಡುವ ಪ್ರಯತ್ನ ಮಾಡಿದರು. ಬಸವಣ್ಣನವರು ಭಾರತೀಯ ಹೆಣ್ಣು ಮೂಲೆಗುಂಪಾಗಿರುವುದನ್ನು ಗುರುತಿಸುತ್ತಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮುಂತಾದ ವಚನಕಾರರು ಸೇರಿ ಅದುವರೆಗು ಮಹಿಳೆಯರು ಅನುಭವಿಸುತ್ತಿದ್ದ ಕಷ್ಟಗಳನ್ನು ಪರಿಹಾರ ಮಾಡಲು ಮಹಿಳೆಯನ್ನ ಶೋಷಣೆಯ ಜೈಲಿನಿಂದ ಬಿಡಿಸಲು ಪ್ರಯತ್ನ ಮಾಡಿ ಮಹಿಳೆಗೆ ವಿಶೇಷ ಸ್ಥಾನಮಾನ ನೀಡಿದರು. ಅದೇ ರೀತಿ ದಾಸರು ಧಾರ್ಮಿಕ ಮೂಲಭೂತವಾದಿತನದ ಕಿಲುಬು ತೊಳೆದವರು. ದಾಸರು ಹೆಣ್ಣನ್ನು ಪುರುಷನ ಸಾಧನೆಗೆ ಅಡ್ಡಿಯೆಂದು ಗ್ರಹಿಸಿದ್ದಾರೆ.

ಸಂತ ಪರಂಪರೆ ಎದುರಾದಗಲೆಲ್ಲ ಕಾಡುವ ಒಂದು ಸಮಸ್ಯೆ ಎಂದರೆ ಅದು ಹೆಣ್ಣನ್ನು ಕುರಿತಾದ ಅವರ ಗ್ರಹಿಕೆ, ಅದರ ಬಗೆಗೆ ಎಷ್ಟೇ ಯೋಚಿಸಿದರೂ ಅಲ್ಲಿ ಮಂಡಿತವಾಗಿರುವ ವಿಚಾರಧಾರೆಯು ಹೆಣ್ಣನ್ನು ಸಮಾನವಾದ ನೆಲೆಯಲ್ಲಿ ಗ್ರಹಿಸಿಯೇ ಇಲ್ಲ. ಹಲವು ತತ್ವಪದಕಾರ್ಥಿಯರು ಈ ಸಾಧಕರ ಪರಂಪರೆಯಲ್ಲಿದ್ದರು ಕೂಡ ಪುರುಷರ ತತ್ವಪದಕಾರರಲ್ಲಿನ ವಿಚಾರಗಳನ್ನು ಗಮನಿಸಿದಾಗ ಹೆಣ್ಣನ್ನು ಸಮಾನವಾದ ನೆಲೆಯಲ್ಲಿ ಕಂಡಿಲ್ಲ. ಹೆಣ್ಣನ್ನು ಮಾಯೆ, ರಾಕ್ಷಸಿ, ಪಿಡಕಿ, ಸಾಧನೆಗೆ ತೊಡಕಾಗಿರುವ ಬಂಧನದ ಬಲೆ ಇತ್ಯಾದಿ ಅರ್ಥಗಳ ನೆಲೆಯಲ್ಲಿ ಪರಿಗಣಿಸಲಾಗಿದೆ. ಇತರೆ ಸಾಮಾಜಿಕ ನೆಲೆಯಲ್ಲಿ ಹೆಣ್ಣನ್ನು ನೋಡಿಲ್ಲ. ಅಂದರೆ ಸಂತರಲ್ಲಿ ವೈಚಾರಿಕತೆ-ಪ್ರಖರವಾಗಿದ್ದಾಗಲೂ ಹೆಣ್ಣಿನ ಬಗೆಗೆ ಬಂದಾಗ ಈ ವಿಚಾರದಲ್ಲಿ ಸದಾ ಭಿನ್ನಮತವನ್ನು ಇಟ್ಟುಕೊಂಡೇ ಅವರನ್ನು ಮುಖಾಮುಖಿಯಾಗಬೇಕಿದೆ ಎಂದು ರಂಗನಾಥ ಕಂಠನಕುಂಟೆಯವರು ಅಭಿಪ್ರಾಯ ಪಟ್ಟಿದ್ದಾರೆ.

ಕೆಲವು ತತ್ವಪದಕಾರರಾದ ಹಸನಸಾಬ, ಕೂಡಲೂರು ಬಸವಲಿಂಗಪ್ಪ, ಮಹಾಗಾಂವ ಮೀರಾಸಾಬ, ಸಾವಳಾಗಿ ಮಹಮ್ಮದ್ ಸಾಬ, ದ್ಯಾಗಯಿ ಗುಂಡಪ್ಪ ಮುಂತಾದವರ ಮಹಿಳಾ ವಿರೋಧಿ ತತ್ವಪದಗಳು ಹೆಣ್ಣಿನ ಬಗೆಗೆ ತಾಳಿದ ತತ್ವಪದಕಾರರ ನಿಲುವು ಮಾರಕವಾದುದ್ದೆ ಆಗಿದೆ. ತತ್ವಪದಕಾರರು

ಕಾಣಿಸಿಕೊಂಡ ಕಾಲಾವಧಿಯಲ್ಲಿ ಮಹಿಳೆಗೆ ಒದಗಿದ ಅವಸ್ಥೆಗೆ ಯಾವ ಕಾರಣಗಳಿದ್ದವು, ಅವುಗಳನ್ನು ಅರಿಯುವ ಶಕ್ತಿ ಇವರಿಗೆ ಯಾಕೆ ಇರಲಿಲ್ಲ ಎಂಬುದರ ಶೋಧ ನಡೆಯಬೇಕಿದೆ.

ಒಟ್ಟಾರೆ ವಿರಕ್ತ ಪರಂಪರೆಯಲ್ಲಿ ಮಹಿಳೆಯನ್ನು ಕುರಿತು ಮುಜುಗರಗಳು ಇನ್ನೂ ಉಳಿದಿವೆ. ಇಲ್ಲದಿದ್ದರೆ ಅನೇಕ ಸಂತರು ಹೆಣ್ಣು, ಮಣ್ಣು, ಹೊನ್ನುಗಳ ಸಮೀಕರಣವನ್ನು ಬಳಸುವುದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಹೆಣ್ಣು ಎಂಬ ಕಾರಣಕ್ಕೆ ತಾರತಮ್ಯ ಮಾಡಬೇಡಿ ಎಂದು ಪ್ರತಿಭಟಿಸುವವರು ತುಂಬಾ ಕಡಿಮೆಯಿದ್ದಾರೆ.

ಉಳಿದ ಹಾಗೆ ಹಲವರು ಯೋನಿಗಳಲ್ಲಿ ಹುಟ್ಟಿಬರುವುದು ಶಾಪ ಎಂದು ನಂಬುತ್ತಾರೆ. ಕೆಳಜಾತಿಗಳಿಗೆ ಬಡವರಿಗರ ಕೊಟ್ಟ ಮೇಲ್ಚನೆಯನ್ನು ಸಂತಪರಂಪರೆ ಮಹಿಳೆಯರಿಗೆ ಕೊಟ್ಟಿತೇ ಎನ್ನುವ ಪ್ರಶ್ನೆಯನ್ನು ಕಡೆಗಾಣಿಸುವುದು ಕಷ್ಟ. ಹೀಗಾಗಿ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ಈ ಬಗೆಯ ಸಂತರ ಆಧ್ಯಾತ್ಮಿಕ ಸಮಾನತೆಯ ಆಶಯಗಳು ಎಷ್ಟರ ಮಟ್ಟಿಗೆ ನಿವಾರಿಸಿದವು ಎನ್ನುವ ಪ್ರಶ್ನೆಯನ್ನು ಸರಳೀಕರಿಸದೆ ಚರ್ಚಿಸಬೇಕಿದೆ ಎಂದು ರಹಮತ್ ತರೀಕೆರೆಯವರು ಹೇಳಿದ್ದಾರೆ.

ಪ್ರಸ್ತುತ ಸಂಶೋಧನ ಪ್ರಬಂಧದಲ್ಲಿ "ಕನ್ನಡ ತತ್ವಪದಗಳಲ್ಲಿ ಮಹಿಳೆಯ ಸಂವೇದನೆಯ ಸ್ವರೂಪ" ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಮುಖ ತತ್ವಪದಕಾರರನ್ನು ಗಮನದಲ್ಲಿ ಇರಿಸಿಕೊಂಡು ತತ್ವಪದಕಾರರ ನೆಲೆಯಲ್ಲಿಯೆ ಮಹಿಳಾ ಸಂವೇದನೆಯ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯಕ್ಕೆ ತತ್ವಪದಕಾರರ ಕೊಡುಗೆ ವಿಶಿಷ್ಟವಾದುದು. ಸಮಾಜದಲ್ಲಿ 'ಮಹಿಳಾ ಸಂವೇದನೆಯ' ದೃಷ್ಟಿಯಿಂದ ತತ್ವಪದಗಳಲ್ಲಿ ಮಹಿಳೆ ಬಗೆಗೆ ತತ್ವಪದಕಾರರು ತಾಳಿದ ನಿಲುವನ್ನು ನನ್ನ ಈ ಸಂಶೋಧನೆಯಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದೇನೆ. ಇದು ಏಕ ತತ್ವಪದಕಾರನ ಅಧ್ಯಯನವಾಗಿರದೆ. ಪ್ರಮುಖ ತತ್ವಪದಕಾರರನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮಹಿಳಾ ಕಾಳಜಿಯನ್ನು ಕನ್ನಡ ತತ್ವಪದಗಳಲ್ಲಿ ಸಾಂಸ್ಕೃತಿಕ ಅಧ್ಯಯನದ ಹಿನ್ನಲೆಯಲ್ಲಿ ಅವಲೋಕಿಸುವುದು ಇಲ್ಲಿನ ಪ್ರಧಾನವಾದ ಉದ್ದೇಶವಾಗಿದೆ.

ಹದಿನೇಳರಿಂದ ಇಪ್ಪತ್ತನೇ ಶತಮಾನದವರೆಗೆ ರಚನೆಗೊಂಡ ಈ ತತ್ವಪದ ಸಾಹಿತ್ಯವು ವ್ಯಕ್ತಿಗತ ಅಧ್ಯಯನ, ಜಿಲ್ಲಾವಾರು ಅಧ್ಯಯನ, ತತ್ವಪದಕಾರರು ಸಾಂಸ್ಕೃತಿಕ ಅಧ್ಯಯನ, ಭಾಷಿಕ ಅಧ್ಯಯನ ಈಗಾಗಲೆ ನಡೆದಿವೆ. ತತ್ವಪದಗಳಲ್ಲಿ ಮಹಿಳಾ ಸಂವೇದನೆಯನ್ನು ಸಾರುವ ಅಥವಾ ಮಹಿಳಾ ಸಂವೇದನೆಯ ಸ್ವರೂಪವನ್ನು ಗುರುತಿಸುವ ಸದಾಶಯದಿಂದ "ಕನ್ನಡ ತತ್ವಪದಗಳಲ್ಲಿ ಮಹಿಳಾ ಸಂವೇದನೆಯ ಸ್ವರೂಪ" ವನ್ನು ಕುರಿತು ಸಂಶೋಧನಾ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

ಹೆಣ್ಣು ಮತ್ತು ಇಡೀ ಸಮಾಜದ ಎಲ್ಲ ನೆಲೆಗಳನ್ನು ನಿರಾಕರಿಸುವ ಅವರು ಮಂಡಿಸಿರುವ ಪಾರಮಾರ್ಥದ ಆತ್ಯಂತಿಕ ಪರಿಹಾರಗಳ ಬಗೆಗೆ ಭಿನ್ನಮತದ ಎಚ್ಚರದೊಂದಿಗೆ ಅವರನ್ನು ಮುಖಾಮುಖಿಯಾಗಿಸುವ ಮತ್ತು ಹೆಣ್ಣನ್ನು ಕುರಿತಾದ ಅವರ ಗ್ರಹಿಕೆ, ಅವರು ಮಂಡಿಸಿರುವ ವಿಚಾರಧಾರೆಯ ಅಂಶಗಳನ್ನೊಳಗೊಂಡ ತತ್ವಪದಗಳ ಕುರಿತು ನನ್ನ ಅಧ್ಯಯನದಲ್ಲಿ ಕೂಲಂಕುಶವಾಗಿ ಚರ್ಚಿಸುವ ಉದ್ದೇಶವನ್ನು ಹೊಂದಿದೆ.

ಇಲ್ಲಿ ಯಾವುದೇ ಜಾತಿ–ಪಂಥಕ್ಕೆ ಸೀಮಿತಗೊಳಸದೆ 'ಮಹಿಳಾ ಸಂವೇದನೆ'ಯನ್ನು ಸಾರುವ ತತ್ವಪದಕಾರರನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಹಲವಾರು ತತ್ವಪದಕಾರರು ಅನುಭವದಿಂದ ಪಡೆದ ಜ್ಞಾನದ ಮೂಲಕ ರಚಿಸಿದಂತಹ ವಿಚಾರಧಾರೆಗಳನ್ನು ತತ್ವಪದಗಳ ಮೂಲಕ ನಮಗೆಲ್ಲಾ ಹಂಚಿದ್ದಾರೆ. ಅಂತಹ ಹಲವಾರು ವಿಚಾರಗಳನ್ನು ಅನಾವರಣಗೊಳಸುವ ಉದ್ದೇಶ ಇಲ್ಲಿಯದಾಗಿದೆ. ಜಾತಿ–ಮತಗಳಂದ ದೂರವಿದ್ದು ಸಮಾಜದಲ್ಲಿ ಸಾಂಸ್ಕೃತಿಕ ಭಿನ್ನತೆಗಳಗೆ ಬದಲಾಗಿ ಮಹಿಳೆ ಬದುಕುತ್ತಿರುವ ಪರಿಸರದ ಭಿನ್ನತೆಗಳನ್ನು ತಿಳಸುವ ಉದ್ದೇಶವನ್ನು ಹೊಂದಲಾಗಿದೆ.

ತತ್ವಪದಗಳಲ್ಲಿ ಕಂಡುಬರುವ 'ಮಹಿಳೆ ಸಂವೇದನೆ' ಯನ್ನು ಕಟ್ಟಿಕೊಡಲು ಸಹಾಯಕವಾಗುವ ಪದಗಳನ್ನು ಅವಲೋಕಿಸಿ ಅವರು ಸಾಧಿಸ ಹೊರಟ ಸಮನ್ವಯ ನೆಲೆಯನ್ನು ಗುರುತಿಸುವುದು. ಅದರ ಬೆನ್ನೆಲುಬಿನಂತೆ ಕ್ರಿಯಾಶೀಲವಾಗಿರುವ 'ಸಮಾಜವಾದಿ' ಅಂಶಗಳನ್ನು ಕಂಡುಕೊಳ್ಳುವುದು ಇದರೊಂದಿಗೆ ಧಾರ್ಮಿಕ, ಭೌಗೋಳಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕ್ಷೇತ್ರಗಳಲ್ಲಿ ಮಹಿಳೆಯ ಸ್ಥಾನ ಮತ್ತು ಅವಳು ಎದುರಿಸುತ್ತಿರುವ ಸವಾಲುಗಳು, ಸಮಸ್ಯೆಗಳು, ಲಿಂಗತಾರತಮ್ಯತೆ, ಭೌದ್ಧಿಕ ಸ್ವಾತಂತ್ರದಿಂದ ದೂರ ಉಳದಿರುವಂತಹ ಸಂಗತಿಗಳನ್ನು ಅಭಿವ್ಯಕ್ತ ಪಡಿಸುವ ಚಿಂತನೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳುವ ಉದ್ದೇಶವಿದೆ. ಸ್ಥಗಿತಗೊಂಡ ಧರ್ಮ ನಿಯಮ, ಪುರೋಹಿತಶಾಹಿ ವ್ಯವಸ್ಥೆ. ವಸಹಾತುಶಾಹಿ ವಿರೋದಿ ನಿಲುವು, ದೇಶಿ ಪ್ರಭುತ್ವಗಳ ನಿರಾಕರಣೆ, ಲಿಂಗಭೇಧ ವ್ಯವಸ್ಥೆ, ಜಾತಿವ್ಯವಸ್ಥೆ–ಅಂತಹ ಅಂಶಗಳನ್ನು 'ತಳಸಮುದಾಯದ ಭಕ್ತಿಪಂಥದ ಹಿನ್ನಲೆಯಲ್ಲಿ' ಮಹಿಳಾವಾದದಲ್ಲಿ ತತ್ವಪದಕಾರರು ಹೇಗೆ ಪ್ರತಿಕ್ರಿಯೆ ನೀಡಿದ್ದಾರೆ? ಎಂಬುದನ್ನು ಸಂಶೋಧನೆ ಮೂಲಕ ಕಂಡುಕೊಳ್ಳುವುದು ಅಧ್ಯಯನದ ಪ್ರಮುಖ ಉದ್ದೇಶ.

ಲಿಂಗಾತರತಮ್ಯತೆ, ಪುರುಷಪ್ರಧಾನತೆ, ಸ್ತ್ರೀ ಶೋಷಣೆ, ಸ್ತ್ರೀ ಸ್ಥಾನಮಾನ ಕೌಟುಂಬಿಕ ನೆಲೆಯಲ್ಲಿ ಪುರುಷ ಪ್ರಧಾನತೆ, ಸ್ತ್ರೀ ಶಿಕ್ಷಣ, ಸತೀಪದ್ಧತಿ, ಬಾಲ್ಯವಿವಾಹ, ಅಸಮವಿವಾಹ, ವೈಧವ್ಯ ಇತ್ಯಾದಿ. ಸಮಾಜಿಕ ಪಿಡುಗುಗಳಾದ ದೇವದಾಸಿ ಪದ್ಧತಿ, ಬಸವಿ ಬಿಡುವ ಪದ್ಧತಿ ಮುಂತಾದವುಗಳ ಬಗೆಗೆ ತತ್ವಪದಕಾರರು ಹಾಡಿರುವ ತತ್ವಪದಗಳನ್ನು ಅನುಲಕ್ಷಿಸಿ ನನ್ನ ಸಂಶೋಧನೆಯಲ್ಲಿ ಅಧ್ಯಯನ ಮಾಡಿ ಪ್ರಸ್ತುತ ಮಹಾಪ್ರಬಂಧ ಸಿದ್ಧಪಡಿಸಿದ್ದೇನೆ.

೧೭ ರಿಂದ ೨೦ನೇ ಶತಮಾನವನ್ನು ತತ್ವಪದಗಳ ಸುವರ್ಣಯುಗವೆಂದು ಕರೆಯಲಾಗುತ್ತದೆ. ಈ ಕಾಲಾವಧಿಯಲ್ಲಿ ರಚನೆಗೊಂಡ ಪದಗಳನ್ನು ತತ್ವಪದಗಳೆಂದೆ ಗುರುತಿಸಲಾಗುತ್ತದೆ. ೧೨ನೆಯ ಶತಮಾನದಲ್ಲಿ ಸಕಲೇಶ ಮಾದರಸ, ಬಸವಣ್ಣ, ಅಲ್ಲಮಪ್ರಭು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸ್ವರವಚನ ಸಾಹಿತ್ಯದ ಆರಂಭದ ತತ್ವಪದಕರರೆಂದು ಗುರುತಿಸಬಹುದು. ೧೮-೧೯ನೆಯ ಶತಮಾನದಲ್ಲಿ ಶಿಶುನಾಳ ಶರೀಫ, ಕಡಕೊಳ ಮಡಿವಾಳಪ್ಪ, ಮೈಲಾರ ಬಸವಲಿಂಗ ಶರಣ, ಕೈವಾರ ನಾರಯಣಪ್ಪ, ಚೆನ್ನೂರ ಜಲಾಲಸಹೇಬ, ಖೈನೂರ ಕೃಷ್ಣಪ್ಪ, ಕೋಹಿನೂರ ಹುಸನಸಾಬ, ರಾಮಪುರದ ಬಕ್ಕಪ್ಪಯ್ಯ, ಮೋಟ್ನಳ್ಳಿ ಹಸನಸಾಹೇಬ, ದ್ಯಾಗಯಿ ಗಂಡಪ್ಪ, ಕೂಡಲುರು ಬಸವಲಿಂಗಪ್ಪ, ತೆಲಗವಾಳ ರೇವಪ್ಪ, ಸಾವಳಗಿ ಮಹಮ್ಮದ ಸಾಹೇಬ, ರಾಚವ್ವ, ಗಂಗಮ್ಮ, ಪಾತಿಮಾ, ಹನುಮಂತವ್ವ ಮುಂತಾದ ತತ್ವಪದಕಾರರು ತತ್ವಪದ ಸಾಹಿತ್ಯಕ್ಕೆ ತಮ್ಮದೆಯಾದ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಮಹಿಳೆಯ ಸಂವೇದನೆಯ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ನೆರವಾಗುವ ಎಲ್ಲ ತತ್ವಪದಕಾರರನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದು. ಕನ್ನಡದಲ್ಲಿ ಇವರೆಗೆ ಬಂದಂತಹ ತತ್ವಪದಗಳ ಸಂಗ್ರಹ ಗ್ರಂಥಗಳನ್ನು ಅವಲೋಕಿಸಿ ಅವುಗಳಲ್ಲಿ ತತ್ವಪದಗಳು ಮಹಿಳಾ ವಿಷಯಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಕಾಲ, ವ್ಯಾಪ್ತಿ ಮತ್ತು ವಿಷಯ ವ್ಯಾಪ್ತಿಯನ್ನು ಹಾಕಿಕೊಳ್ಳಲಾಗಿದೆ. ಕನ್ನಡ ತತ್ವಪದಗಳಲ್ಲಿ ಉಪಲಬ್ಧವಾಗುವ ಮಹಿಳಾ ಸ್ವರೂಪವನ್ನು ಸಾರುವ ಪದಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿದ್ದು. ಕರ್ನಾಟಕದ ವ್ಯಾಪ್ತಿಯೊಳಗೆ ಬರುವ ಪ್ರಮುಖ ತತ್ವಪದಕಾರರನ್ನು ಅನುಲಕ್ಷಿಸಿಸಿ ಅವರ ತತ್ವಪದಗಳನ್ನು ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ. ತತ್ವಪದಕಾರರ ಮಹಿಳಾ ಪರಿಕಲ್ಪನೆಯ ಅಭಿವ್ಯಕ್ತಿಯ ಸ್ವರೂಪ, ಆಶಯ ಬೇರೆ-ಬೇರೆಯಾಗಿದ್ದು ಬದಲಾವಣೆಗೊಂಡಿರುವುದನ್ನು ಗಮನಿಸಿ ಮಹಿಳಾ ತತ್ವಪದಕಾರರನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದೇನೆ.

ಅಧ್ಯಯನದ ಮಹತ್ವ

ತತ್ವಪದಕಾರರನ್ನು ಕುರಿತು ಬಂದಿರುವ ಕೃತಿಗಳು ಮತ್ತು ಲೇಖನಗಳಲ್ಲಿರುವ ಆಕಾರಗಳನ್ನು ಬಳಸಿಕೊಂಡು ತತ್ವಪದ ರಚನೆಗಳಲ್ಲಿ ಮಹಿಳಾ ಸಂವೇದನೆಯ ಸ್ವರೂಪವನ್ನು ಗಂಭೀರವಾಗಿ ಅಧ್ಯಯನ ಮಾಡಲಾಗಿದೆ. ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ಕನ್ನಡ ತತ್ವಪದಗಳ ಸಂಪುಟ ಮತ್ತು ತತ್ವಪದಗಳ ಕುರಿತು ಬಂದಿರುವ ವಿಮರ್ಶ ಕೃತಿಗಳನ್ನು ಅವಲೋಕಿಸಿದಾಗ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ. ಮಹಿಳಾ ಆಸ್ಮಿತೆ ಕುರಿತು ಹಾಡಿರುವ ತತ್ವಪದಕಾರರು ಮಹಿಳೆಯರನ್ನು

ಗೊಂದಲವಾಗಿಯೆ ಕಂಡಿದ್ದಾರೆ. ಲೌಕಿಕ ಮತ್ತು ಅಲೌಕಿಕ ನೆಲೆಗಳಲ್ಲಿ ಮಹಿಳಾ ಸಂವೇದನೆಯ ಸ್ವರೂಪದ ಬಗ್ಗೆ ಮಾಹಿತಿ ನೀಡುತ್ತವೆ. ಸಮಾಜದಲ್ಲಿ ಜೀವಿಸುತ್ತಿರುವ ಮಹಿಳೆಯ ಬದುಕಿನ ಚಿತ್ರಣವನ್ನು ಅನುಭವಿ ಪರಂಪರೆಯು ವಿಶ್ಲೇಷಿಸಿರುವುದರ ಬಗೆಗೆ ಸಾಕಷ್ಟು ವಿವರಗಳು ದೊರೆಯುತ್ತವೆ.

ಪುರುಷ ಮತ್ತು ಮಹಿಳಾ ತತ್ವಪದಕಾರರ ರಚನೆಗಳಲ್ಲಿ ಮಹಿಳೆ ಕುರಿತಾದ ಭಕ್ತಿಯ ಸ್ವರೂಪವನ್ನು ತತ್ವಪದ ಕೃತಿಗಳು ಕಟ್ಟಿಕೊಡುತ್ತವೆ. ಜನ ಸಮುದಾಯದ ನಡುವೆ ವಾಸಮಾಡುತ್ತಿರುವ ಮತ್ತು ಲೋಕ ಸಂಚಾರಿಗಳಾದ ತತ್ವಪದಕಾರರು ಬದುಕಿನ ಅನುಭಾವಗಳನ್ನು ಸಮಾಜದ ಜನಮಾನಸಗಳಲ್ಲಿ ಅಳವಾಗಿ ನೆಲೆವೂರುವಂತೆ ಹಾಡಿ ಜನಪ್ರಿಯತೆಗಳಿಸಿಕೊಂಡಿದ್ದಾರೆ. ಮುಖ್ಯವಾಗಿ ವಚನ ಮತ್ತು ಕೀರ್ತನೆ ಸಾಹಿತ್ಯಕ್ಕೆ ತತ್ವಪದ ಸಾಹಿತ್ಯವನ್ನು ಹೋಲಿಕೆ ಮಾಡಿ ನೋಡಿದಾಗ ಮಹಿಳೆ ಕುರಿತಾದ ವಿವರಣೆ ಭಿನ್ನವಾಗಿದೆ. ಮತ್ತು ಮುದ್ರಿಕೆಯ ರೂಪದಲ್ಲಿ ಬಣ್ಣಿಸಿದ್ದಾರೆ. ದಲಿತ ತತ್ವಪದಕಾರರು, ವ್ಯಕ್ತಿ ಕೇಂದ್ರಿತ ಸಂಶೋಧನೆಗಳು, ಜಿಲ್ಲಾವಾರು ತತ್ವಪದಕಾರರ ಕುರಿತಂತೆ ಅಧ್ಯಯನಗಳು ನಡೆದಿವೆ. ಮಹಿಳೆ ಕುರಿತಾದ ಅಧ್ಯಯನಗಳು ಈವರೆಗೂ ನಡೆದಿಲ್ಲ ಅದರಲ್ಲೂ ಕೇವಲ ಸಂಸಾರದಲ್ಲಿ ಮಹಿಳೆಯರ ಪಾತ್ರಗಳನ್ನು ಬಿಡಿ ತತ್ವಪದಕಾರರ ರಚನೆಗಳಲ್ಲಿ ವಿವರಣೆ ನೀಡಿದ್ದಾರೆ ವಿನಹ ಒಟ್ಟು ತತ್ವಪದಕಾರರ ರಚನೆಗಳಲ್ಲಿ ಮಹಿಳಾ ಸಂವೇದನೆ ಅಧ್ಯಯನಗಳು ನಡೆದಿಲ್ಲವೆಂದೆ ಹೇಳಬಹುದು. ತತ್ವಪದಗಳ ಭಾಷಿಕ ಸ್ವರೂಪ, ತತ್ವಪದಕಾರರ ತೌಲನಿಕ ಅಧ್ಯಯನಗಳು ನಡೆದಿದ್ದು ಇವರೆಗೂ ಮಹಿಳೆಯರ ಆಸ್ಮಿತೆ ಕುರಿತ ಅಧ್ಯಯನಗಳು ನಡೆದಿಲ್ಲ. ಸಂಪಾದಿತ ಕೃತಿಗಳು, ಪ್ರಕಟಿತ ಲೇಖನಗಳು, ವಿಮರ್ಶ ಕೃತಿಗಳನ್ನು ಗಮನಿಸಿದಾಗ ಮಹಿಳೆಯರ ಕುರಿತಾದ ವಿಶ್ಲೇಷಣೆ ಅಷ್ಟಾಗಿ ಕಂಡುಬರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು 'ಮಹಿಳಾ ಸಂವೇದನೆಯ ಸ್ವರೂಪವನ್ನು ಕಟ್ಟಿಕೊಡಲು ಹಲವು ಮೂಲಗಳಲ್ಲಿ ಲಭ್ಯವಿರುವ ಆಕಾರ ಸಾಮಾಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ತತ್ವಪದಗಳಲ್ಲಿ ಮಹಿಳೆ ಚಿತ್ರಣಗೊಂಡಿರುವುದರ ಬಗೆಗೆ ಅಷ್ಟಾಗಿ ವಿವರಣೆ ಕಂಡುಬರುವುದಿಲ್ಲ. ಮಹಿಳೆಯರನ್ನು ತತ್ವಪದಕಾರರು ವಿಶ್ಲೇಷಿರುವ ಹಲವು ಮುಜುಲುಗಳ ಅಧ್ಯಯನವನ್ನು ಕೈಗೊಂಡಿದ್ದು ಮಹಿಳೆಯರ ಕುರಿತಾದ ಮಹತ್ವದ ಅಂಶಗಳನ್ನು ಮಹಾಪ್ರಬಂಧದಲ್ಲಿ ಗುರುತಿಸಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಒಟ್ಟು ೩೩ ತತ್ವಪದ ಸಾಹಿತ್ಯ ಕೃತಿಗಳ ಸಂಪುಟಗಳು ಪ್ರಕಟಗೊಂಡಿವೆ. ಹಾಗೆ ಹಲವಾರು ವಿಮರ್ಶಾ ಕೃತಿಗಳು, ಬಿಡಿಲೇಖನಗಳು ಪ್ರಕಟಗೊಂಡಿವೆ. ತತ್ವಪದ ಸಾಹಿತ್ಯದಲ್ಲಿ ಈ ವರೆಗೂ ನಡೆದಿರುವ ಅಧ್ಯಯನಗಳು ಮಹಿಳಾ ಸಂವೇದನೆಯನ್ನು ಹೆಚ್ಚಾಗಿ ಅಧ್ಯಯನ ಮಾಡಿಲ್ಲ ಹಾಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಮಹಿಳಾ ಸಂವೇದನೆಯನ್ನು ಸಾರುವ ಒಟ್ಟು ತತ್ವಪದಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಮಹಿಳೆ ಹುಟ್ಟಿನಿಂದ ಸಾವಿನತನಕ ಅನುಭವಿಸುವ ಬದುಕಿನ ಕಷ್ಟ, ನೋವು-ನಲಿವು, ಎದುರಿಸುವ ಸಮಸ್ಯೆಗಳು ಎಲ್ಲಾ ವಿಚಾರಗಳನ್ನು ತತ್ವಪದ

ಸಾಹಿತ್ಯದಲ್ಲಿ ನೋಡಬಹುದು. ಭಕ್ತಿ ನೆಲೆಯಲ್ಲಿ ಮತ್ತು ಮಹಿಳೆಯರನ್ನು ವಿಶ್ಲೇಷಿಸಿರುವುದನ್ನು ವಿಮರ್ಶಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಮಹಿಳೆ ಆಸ್ಮಿತೆಯನ್ನು ಸಾರುವ ತತ್ವಪದಗಳನ್ನು ಗಮನಿಸಿ ಮಹಿಳಾ ಸಂವೇದನೆಯ ಸಾಂಸ್ಕೃತಿಕ ಅಧ್ಯಯನಕ್ಕೆ ಹೊಸ ನೆಲೆಗಳನ್ನು ಕಲ್ಪಿಸುವ ಪ್ರಯತ್ನ ಮಾಡಲಾಗಿದೆ.

೧೭, ೧೮, ೧೯ನೇ ಶತಮಾನದ ತತ್ವಪದಕಾರ ರಚನೆಗಳನ್ನು ಸಂಪಾದನೆ ಮಾಡುವ ಕಾರ್ಯ ನಡೆದಿದೆ ವಿನಹ ಅಷ್ಟಾಗಿ ಅಧ್ಯಯನಗಳು ನಡೆದಿಲ್ಲ. ಹಾಗಾಗಿ ಈ ಕಾಲಘಟ್ಟದಲ್ಲಿ ಬರುವ ಒಟ್ಟು ತತ್ವಪದಕಾರರ ರಚನೆಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ನಮ್ಮ ನೆಲಮೂಲ ಸಂಸ್ಕೃತಿ ಸಾರುವ ಅದರಲ್ಲೂ ಮಹಿಳೆಯರ ಕುರಿತಾದ ಅನುಭವಿಗಳ ಅನುಭಾವಗಳನ್ನು ದಾಖಲಿಸಿ ಮುಂದಿನ ಪೀಳಗೆಗೆ ಮತ್ತು ಅಧ್ಯಯನಕಾರರಿಗೆ ಉಳಿಸುವ ಮಹತ್ವದ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಅಧ್ಯಯನದ ಸಮೀಕ್ಷೆ

ಯಾವುದೇ ವಿಷಯವನ್ನು ಸಂಶೋಧನೆ ಅಧ್ಯಯನಕ್ಕೆ ತೆಗೆದುಕೊಳ್ಳುವಾಗ ಆಯಾ ವಿಷಯದಲ್ಲಿ ಆಯಾ ಕ್ಷೇತ್ರಗಳಲ್ಲಿ ಇದುವರೆಗೂ ಏನೇನು ಸಂಶೋಧನಾ ಅಧ್ಯಯನಗಳು ನಡೆದಿವೆ? ಅವುಗಳ ಸ್ವರೂಪವೇನು? ಮತ್ತೇ ಆಗಬೇಕಿರುವ ಅಧ್ಯಯನವು ಏನೇನಿದೆ ಎಂಬುವುದನ್ನು ತಿಳಿದುಕೊಳ್ಳುವುದು ಮುಖ್ಯವಾದುದು ಈವರೆಗೆ ಕನ್ನಡ ತತ್ವಪದಗಳ ಕುರಿತು ಹಲವು ಆಯಾಮಗಳಲ್ಲಿ ಸಂಶೋಧನೆಗಳು ನಡೆದಿದ್ದು ಅವುಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

೧. ಗುಲಬರ್ಗಾ ಜಿಲ್ಲೆಯ ತತ್ವಪದಕಾರರು : ಶಾಂತಪ್ಪ ಟಿ, ಗುರೋಡೆ ಗುಲಬರ್ಗಾ ವಿ.ವಿ ಕಲಬುರ್ಗಿ (೨೦೧೦)

೨. ರಾಯಚೂರು ಜಿಲ್ಲೆಯ ತತ್ವಪದಕಾರರು ಮತ್ತು ಅವರ ಸಾಹಿತ್ಯ : ಸರ್ವಮಂಗಳ ಸಕ್ರಿ, ಕನ್ನಡ ವಿ.ವಿ ಹಂಪಿ (೨೦೦೮)

೩. ಧಾರವಾಡ ಜಿಲ್ಲೆಯ ತತ್ವಪದಕಾರರು : ಮಹೇಶ ಗಾಜಪ್ಪನವರ, ಕರ್ನಾಟಕ ವಿ.ವಿ ಧಾರವಾಡ (೨೦೦೭)

೪. ಬೀದರ್ ಜಿಲ್ಲೆಯ ದಲಿತ ತತ್ವಪದಕಾರರು ಒಂದು ಅಧ್ಯಯನ : ಐಶ್ವರಿ ಎಸ್ ಶಂಭುಶಂಕರ, ಗುಲಬರ್ಗಾ ವಿ.ವಿ (೨೦೦೨)

೫. ರಾಯಚೂರ ಜಿಲ್ಲೆಯ ದಲಿತ ತತ್ವಪದಕಾರರು ಒಂದು ಅಧ್ಯಯನ : ಬಸವರಾಜ ನಾಯಕ, ಗುಲಬರ್ಗಾ ವಿ.ವಿ (೨೦೦೦) (ಎಂ.ಫಿಲ್ ಪ್ರಬಂಧ)

೬. ಗುಲಬರ್ಗಾ ಜಿಲ್ಲೆಯ ದಲಿತ ತತ್ವಪದಕಾರರು ಒಂದು ಅಧ್ಯಯನ : ಮಲ್ಲಿಕಾರ್ಜುನ ದ. ಜಾಬಾ, ಗುಲಬರ್ಗಾ ವಿ.ವಿ (೨೦೦೨)

೭. ಶಿಶುನಾಳ ಶರೀಫ ಅವರ ಜೀವನ, ಕೃತಿಗಳು ಮತ್ತು ದರ್ಶನ ಸಿಂದಗಿ ಎಂ ಎಸ್, ಕರ್ನಾಟಕ ವಿ.ವಿ ಧಾರವಾಡ (೧೯೭೦)

೮. ಕೂಡಲೂರು ಬಸವಲಿಂಗ ಶರಣರು : ಶಾಸ್ತ್ರೀಮಠ ಎಂ ಜಿ, ಕರ್ನಾಟಕ ವಿ.ವಿ ಧಾರವಾಡ (೧೯೮೭)

೯. ಕಡಕೋಳ ಮಡಿವಾಳಪ್ಪನವರು ಮತ್ತು ಅವರ ಶಿಷ್ಯರು : ಒಂದು ಅಧ್ಯಯನ ಮೀನಾಕ್ಷಿ ಬಾಳಿ, ಗುಲಬರ್ಗಾ ವಿ.ವಿ ಕಲಬುರ್ಗಿ (೧೯೯೫)

೧೦. ರಸ್ತಾಪುರ ಭೀಮಕವಿ ಹಾಗೂ ಅವರ ಕೃತಿಗಳು : ಒಂದು ಅಧ್ಯಯನ : ಶಾಂತಪ್ಪ.ಎನ್, ಗುಲಬರ್ಗಾ ವಿ.ವಿ ಕಲಬುರ್ಗಿ (೨೦೦೪)

೧೧. ಮೋಟ್ನಳ್ಳಿ ಹಸನಸಾಹೇಬ ಒಂದು ಅಧ್ಯಯನ : ಕೌಲಗಿ ಸುಭಾಶ್ಚಂದ್ರ. ಗುಲಬರ್ಗಾ ವಿ.ವಿ ಕಲಬುರ್ಗಿ (೨೦೦೨)

೧೨. ಸಾವಳಗಿ ಮಹಮ್ಮದ ಸಾಹೇಬ ಜೀವನ ಮತ್ತು ಕೃತಿಗಳ ಸಮೀಕ್ಷೆ : ಹರಿಶ್ಚಂದ್ರ ಎಸ್ ದಿಕ್ಷಂಗಿಕರ್, ಗುಲಬರ್ಗಾ ವಿ.ವಿ ಕಲಬುರ್ಗಿ (೨೦೦೧)

೧೩. ಶಿಶುನಾಳ ಶರೀಫ ಸಾಹೇಬರ ಗೀತೆಗಳು ಒಂದು ಸಾಂಸ್ಕೃತಿಕ ಅಧ್ಯಯನ : ಪಿ.ಬಿ ದೊಡ್ಡಮುನಿ, ಕರ್ನಾಟಕ ವಿ.ವಿ ಧಾರವಾಡ (೨೦೦೩)

೧೪. ತತ್ವಪದ ಸಾಹಿತ್ಯ ಕುರಿತ ಸಾಂಸ್ಕೃತಿಕ ಅಧ್ಯಯನ : ಎನ್. ಪ್ರವೀಣಚಂದ್ರ, ಕುವೆಂಪು ವಿ.ವಿ ಶಿವಮೊಗ್ಗ (೨೦೧೨)

೧೫. ಶಿಶುನಾಳ ಶರೀಫ ಮತ್ತು ಸಂತ ಕಬೀರ : ಒಂದು ತೌಲನಿಕ ಅಧ್ಯಯನ ರಾಮಚಂದ್ರ ಪರಮೇಶ್ವರ ಹೆಗಡೆ ಕರ್ನಾಟಕ ವಿ.ವಿ ಧಾರವಾಡ (೧೯೯೪)

೧೬. ಕನ್ನಡ ತತ್ವಪದಗಳಲ್ಲಿ ಪ್ರಭುತ್ವದ ಪರಿಕಲ್ಪನೆ : ಸೋಮಕ್ಕ ಮಾದಾಪೂರ, ಗುಲಬರ್ಗಾ ವಿ.ವಿ ಕಲಬುರ್ಗಿ (೨೦೧೭).

೧೭. ತತ್ವಪದ ಸಾಹಿತ್ಯದ ಭಾಷೆ : ಒಂದು ಅಧ್ಯಯನ ವಿಪ್ಲವಿ, ಕನ್ನಡ ವಿ.ವಿ ಹಂಪಿ (೨೦೧೧)

ಡಾ.ಸೋಮಕ್ಕ ಮಾದಾಪುರ ಅವರ "ಕನ್ನಡ ತತ್ವಪದಗಳಲ್ಲಿ ಪ್ರಭತ್ವದ ಪರಿಕಲ್ಪನೆ"[೨೦೧೭]ಈ ಮಹಾಪ್ರಬಂಧದ ಐದನೇ ಅಧ್ಯಯದಲ್ಲಿ ಮಹಿಳೆಯ ಆಸ್ಮಿತೆಯ ಕುರಿತು ವಿವಿಧ ಮಜಲುಗಳಲ್ಲಿ ಚರ್ಚೆ ನೆಡೆಸಿದ್ದು ಎಲ್ಲ ಸಮಾಜಗಳಲ್ಲಿ ಲಿಂಗರಾಜಕಾರಣದ ಆಸ್ತಿತ್ವಕ್ಕೆ ಎದುರಾಗುವ ಬಗೆ ಹೇಗಿವೆ? ಮತ್ತು ವಚನಕಾರರು, ದಾಸರಿಗಿಂತ ತತ್ವಪದಕಾರರಲ್ಲಿ ಮಹಿಳೆ ಸಂವೇದನೆಯು ಹೇಗೆ ಭಿನ್ನವಗಿದೆ? ಎಂದು ಪ್ರಭುತ್ವದ ಹಿನ್ನಲೆಯಲ್ಲಿ ಮಹಿಳೆಯನ್ನು ಕುರಿತು ಸವಿವರವಾಗಿ ಚರ್ಚಿಸಿದ್ದಾರೆ. ಹಾಗೂ ಶಿಶುನಾಳ

ಶರೀಫ, ಕಡಕೋಳ ಮಡಿವಾಳಪ್ಪರಂತಹ ಮುಖ್ಯ ತತ್ವಪದಕಾರರು ಮಹಿಳಾ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಹೆಣ್ಣನ್ನು ದೇಹವಾಗಿ, ಮಾಯೆಯಾಗಿ ನೋಡುವ ಸಂಪ್ರದಾಯಿಕ ದೃಷ್ಟಿಕೋನಗಳನ್ನು ಪ್ರತಿರೋಧಿಸುವ ಕೆಲಸವನ್ನು ತತ್ವಪದಕಾರರು ಮಾಡಿರುವುದನ್ನು ಈ ಪ್ರಬಂಧದಲ್ಲಿ ಮಂಡಿಸಿದ್ದಾರೆ.

ಡಾ. ಎನ್. ಇಸ್ಮಾಯಿಲ್ ಅವರ "ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ"[೨೦೦೭]ಈ ಮಹಾಪ್ರಬಂಧದಲ್ಲಿ ಮುಸ್ಲಿಂ ತತ್ವಪದಕಾರ ಶಿಶುನಾಳ ಶರೀಫರ ತತ್ವಪದಗಳ ಮೂಲಕ ಹೆಣ್ಣನ್ನು ಚಿತ್ರಿಸಿದ ರೀತಿಯನ್ನು ವಿಶ್ಲೇಷಣೆಗೆ ಒಳಪಡಿಸಿರುವುದನ್ನು ಗಮನಿಸಬಹುದು. ಶರೀಫರ ಪದಗಳು ಅವರ ಬದುಕಿನ ಅನುಭವಗಳೇ ಇರಬೇಕು. ಶರೀಫರ ವ್ಯಕ್ತಿತ್ವಕ್ಕೆ ಆ ಊರಿನ ಸ್ತ್ರೀಯೊಬ್ಬಾಕೆ ಆಕರ್ಷಿತಳಾಗಿರಬೇಕು. ಅವರ ಸಂಗವನ್ನು ಆಕೆ ಬಯಸಿದ್ದಳಂತೆ ಒಂದು ದಿನ ಶರೀಫರು ಶಾಲೆಗೆ ಹೋಗಿ ಬರುವ ದಾರಿಯಲ್ಲಿ ಕತ್ತಲೆಗೆ ಆಕೆ ಒಬ್ಬಳೆ ನಿಂತಿದ್ದಳು. ಆಕೆಯ ಚೆಲೂವಿಗೆ ಶರೀಫರ ಮನಸ್ಸು ಹೊಯ್ದಾಡಿದಂತು ನಿಜ. ತಮ್ಮನ್ನು ನಿಯಂತ್ರಿಸಿಕೊಂಡಿದ್ದರ ಬಗ್ಗೆ 'ಹಾವ ತುಳದೆನೆ ಮಾನಿನಿ' ಎಂಬ ತತ್ವಪದದ ಮೂಲಕ ಚರ್ಚಿಸಿದ್ದಾರೆ.

ಡಾ. ಜಿ. ಎನ್. ಉಪಾಧ್ಯರವರ "ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು"[೨೦೧೧] ಈ ಮಹಾಪ್ರಬಂಧದಲ್ಲಿ 'ಅನುಭಾವ ಅವಧೂತ ಶರೀಫ' ಎಂಬ ಶೀರ್ಷಿಕೆಯಡಿಯಲ್ಲಿ ಹೆಣ್ಣಿನ ಕುರಿತ ವಿಮರ್ಶೆ, ವಿವರಣಾತ್ಮಕ ಚಿಂತನೆ ಇದೆ. ಇಲ್ಲಿ ಮುಪ್ಪಿನ ಮುದುಕಿಗೆ ಎಚ್ಚರಿಕೆ ಗಂಟೆಯಾಗಿಯೂ ಸಂಸಾರಿಯ ಬಾಳನಲ್ಲಿಯೂ ಮಹಿಳೆಯನ್ನು ರೂಪಕವಿರಿಸುವುದು ಗಮನಾರ್ಹ. 'ಬಿದ್ದಿಯಬೇ ಮುದುಕಿ' 'ಮೋಹದ ಹೆಂಡತಿ ತೀರಿದ ಬಳಿಕ' ಈ ಪದಗಳಲ್ಲಿ ಸಂಸಾರ ಸಾಗರದೊಳಗೆ ಈಜುತ್ತಾ ಮಡದಿಯನ್ನು ಕಳಕೊಂಡ ಪ್ರೇಮ, ಭಾಂದವ್ಯ ಹಾಗೂ ಜೀವನದ ನಶ್ವರತೆಯನ್ನು ಈ ಸಾಲುಗಳಲ್ಲಿ ವಿವರಿಸುತ್ತಾರೆ.

ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ "ವಿಚಾರ ಸಾಹಿತ್ಯ"[೨೦೦೦] ಈ ಮಹಾಪ್ರಬಂಧದಲ್ಲಿ ನಿಜಗುಣಶಿವಯೋಗಿಗಳ 'ಕೈವಲ್ಯ ಪದ್ಧತಿ' ಸರ್ಪಭೂಷಣ ಶಿವಯೋಗಿಗಳ 'ಕಲ್ಪವಲ್ಲರಿ' ಕೃತಿಗಳ ವಿಶ್ಲೇಷಣೆ ಇದೆ. ಇಲ್ಲಿ ಅಂತರಂಗದ ಅರಿವಿನ ಮೂಲಭೂತ ತತ್ವವನ್ನು ಕುರಿತಿರುವುದರಿಂದ 'ತತ್ವಪದಗ'ಳೆಂದು ಕರೆಯುವುದುಂಟು 'ಕೈವಲ್ಯ' ಎಂಬ ಮಾತು ಲೌಕಿಕ ಸಂಗದಿಂದ ದೂರ ನಿಲ್ಲುವ 'ನಿರ್ಲಿಪ್ತ ಸ್ಥಿತಿ' 'ಕೈವಲ್ಯ ಕಲ್ಪವಲ್ಲರಿ' ಯಲ್ಲಿ ಭಕ್ತಿಯ ಎಲ್ಲ ಮುಖಗಳನ್ನು ಅವರ ಸಾಧನೆಯ ಮಾರ್ಗದಲ್ಲಿ ಕಾಣುತ್ತೆವೆ ಅದರಲ್ಲೂ ಮುಖ್ಯವಾಗಿ ಸತಿಪತಿ ಭಾವದ ಮಧುರ ಭಕ್ತಿ ಮಡುಗಟ್ಟಿರುವ ವಿವರಣೆ ಲಿಂಗಸಮಾನತೆಯ ಚರ್ಚೆ ಈ ಕೃತಿಯಲ್ಲಿದೆ.

ಡಾ. ಶಾಂತಪ್ಪ ಟಿ. ಗುರೋಡೆಯವರ "ಬೀದರ ಜಿಲ್ಲೆಯ ತತ್ವಪದಕಾರರು"[೨೦೧೦] ಈ ಮಹಾಪ್ರಬಂಧದಲ್ಲಿ ತತ್ವಪದಗಳ ಅರ್ಥ ವಿವರಣೆಯೊಂದಿಗೆ ಧರ್ಮಗಳ ಪರಮ ಆಕಾಂಕ್ಷೆ

ಸಂಸಾರದಿಂದ ದೂರ ಇದ್ದು 'ಮುಕ್ತಿ' ಪಡೆಯುವುದಾಗಿರುತ್ತದೆ. ಇಲ್ಲಿ ಬಸವಿ, ದೇವದಾಸಿ ಮುಂತಾದ ಅನಿಷ್ಟ ಪದ್ಧತಿಗಳು, ಮೂಡನಂಬಿಕೆ ಹಾಗೂ ಶ್ರದ್ಧೆಗಳಿಗೆ ಜೋತುಬಿದ್ದ ಜಡಗಟ್ಟಿದ ಸಮಾಜದಲ್ಲಿ ಚಲನಶೀಲತೆಯ ಹೋರಾಟಕ್ಕೆ ತೋಡಗಿಸಿಕೊಂಡು ಭಕ್ತಿ ಮಾರ್ಗದ ಮೂಲಕ ತತ್ವಪದಕಾರರು ಸಮಾಜದ ವಿರುದ್ಧ ಕೈಗೊಂಡ ಹೋರಾಟಗಳ ವಿವರಣೆ ಈ ಕೃತಿಯಲ್ಲಿರುವುದು ಗಮನಾರ್ಹ.

ಡಾ. ಗುರುಲಿಂಗಪ್ಪ ಧಬಾಲೆಯವರ "ಬೀದರ ಜಿಲ್ಲೆಯ ಅನುಭಾವಿ ಕವಿಗಳು"[೨೦೦೬] ಈ ಮಹಾಪ್ರಬಂಧಲ್ಲಿ ಅನುಭಾವಿ ಕವಿಗಳು ತಮ್ಮ ಅನುಭಾವ ಸಾಹಿತ್ಯದಲ್ಲಿ ತಮ್ಮ ಅನುಭಾವ ಪ್ರತಿಭೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿದ್ದಾರೆ. ದೇಹ-ಆತ್ಮ-ದೇಹದ ಮೂಲ-ಆತ್ಮದ ನಿಲುವು, ದೇಹದ ಆಸ್ಥಿರತೆ, ಸಂಸಾರದ ಕ್ಷಣಿಕತೆ-ಸತಿ-ಭಾವ, ಜೀವ-ಶಿವೈಕ್ಯಭಾವ, ಮೊದಲಾದ ಸಂಗತಿಗಳನ್ನು ಕುರಿತು ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಪ್ರಸ್ತುತ ಕೃತಿಯ ಐದನೆಯ ಅಧ್ಯಯದಲ್ಲಿ ಪ್ರಮುಖ ತತ್ವಪದಕಾರರ ಜೀವನ ಚರಿತ್ರೆ, ಸಾಂಸಾರಿಕ ಜೀವನ ವೃತ್ತಾಂತವನ್ನು ವಿವರಿಸಿದ್ದಾರೆ. ಇಲ್ಲಿ ಹುಸನಾಸಾಬನ ತತ್ವಪದಗಳ ಆಧಾರದ ಮೇಲೆ ಪತವ್ರತೆ ಸಾವಿತ್ರಿ, ಸತಿ ಅನುಸೂಯ, ಕಮಲದಾಸ, ಅಕ್ಕಮಹಾದೇವಿ ಮೊದಲಾದವರ ಜೀವನ ಚರಿತ್ರೆಯೊಂದಿಗೆ ಮಹಿಳಾ ಸಂವೇದನೆ, ಪ್ರತಿಭಾಟನಾತ್ಮಕ ಸ್ತ್ರೀಯರ ಚಿಂತನೆಯನ್ನು ಧೀರ್ಘವಾಗಿ ಚರ್ಚಿಸಲಾಗಿದೆ.

ಅಪ್ಪಾಸಾಬರವರ "ದ್ಯಾಗಯಿ ಲಾವಣಿಕಾರರು"[೨೦೦೨] ಈ ಮಹಾಪ್ರಬಂಧದಲ್ಲಿ ಜನಪದ ಮಹಿಳೆ ಜೀವಮಾನದಲ್ಲಿ ಸಮಾಜದ ರೀತಿಗಳನ್ನು ಮೀರಿ ಎಂದು ನಡೆದುಕೊಳ್ಳುವುದಿಲ್ಲ. ಅವಳು ತನ್ನ ಬದುಕಿನಲ್ಲಿ ಎರಡು ಆದರ್ಶಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ರೂಢಿಸಿಕೊಂಡು ಬಂದಿರುತ್ತಾಳೆ. ಪಾತಿವ್ರತ್ಯ, ಮುತ್ತೈದೆತನ, ಹಾಗೆ ಹೆಣ್ಣಿನ 'ಶೀಲ' ಮಹಿಳಾ ಸಂವೇದನೆಯ ಬಗ್ಗೆ ದ್ಯಾಗಾಯಿ ಹಜರತ ಸಾಬನ ತತ್ವಪದಗಳ ಉಲ್ಲೇಖಗಳ ಜೋತೆಗೆ ವಿವರಣೆ ಇದೆ. ಹಜರತ್ ಕವಿಯು ಹೆಂಡತಿಯೊಂದಿಗೆ ಸಂಸಾರ ಮಾಡಿ ಮಕ್ಕಳನ್ನು ಪಡೆದು ನಂತರ ಕುಟಂಬ ಜೀವನವನ್ನು ತೊರೆದು ಲೌಕಿಕದಲ್ಲಿದ್ದಾಗ ಬರೆದ ಪದಗಳು ಮತ್ತು ಅಲೌಕಿಕ ಜೀವನ ನಡೆಸುವಗ ಬರೆದ ತತ್ವಪದಗಳಲ್ಲಿ ಮಹಿಳಾಪರ ಚಿಂತನೆಯ ದ್ವಂದ್ವ ನಿಲುವಿನಿಂದ ಚರ್ಚೆಯಾಗಿರುವುದು ಗಮನಾರ್ಹವಾಗಿದೆ.

ಡಾ. ಬಸವರಾಜ ಸಬರದರವರು "ಹೈದರಾಬಾದ್ ಕರ್ನಾಟಕ ತತ್ವಪದಗಳು"[೨೦೦೦] ಎಂಬ ಕೃತಿಯಲ್ಲಿ ತತ್ವಪದದ ಅರ್ಥ, ವಿಶ್ಲೇಣೆಯೊಂದಿಗೆ ಹೈದರಾಬದ್ ಪ್ರಾದೇಶಿಕ ಎಲ್ಲೆಯೊಳಗೆ ಬರುವ ಗುಲಬರ್ಗಾ, ರಾಯಚೂರು, ಬೀದರ್. ಕೊಪ್ಪಳ ಜಿಲ್ಲೆಗಳ ತತ್ವಪದಗಳನ್ನು ಸಂಗ್ರಹಿಸಿ ಆ ಪ್ರದೇಶಗಳ ವೈಶಿಷ್ಟ್ಯ ಸಂಸ್ಕೃತಿ, ಆಚಾರ, ವಿಚಾರ, ನೈತಿಕತೆಯೊಂದಿಗೆ ಮಹಿಳೆಯನ್ನು ಪ್ರತಿನಿಧಿಕರಿಸಿರುವ ತತ್ವಪದಗಳು ಲಭ್ಯವಾಗುತ್ತವೆ.

ಡಾ. ಮಿನಾಕ್ಷಿಬಾಳ ಅವರು ಸಂಪಾದಿಸಿರುವ "ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವಪದಗಳು"[೧೯೯೭] ಈ ಕೃತಿಯಲ್ಲಿ ಖೈನೂರ ಕೃಷ್ಣಪ್ಪ, ತೆಲಗಬಾಳ ರೇವಪ್ಪ, ಕಲ್ಲೆವಡ ಸಿದ್ದಪ್ಪ,

ಚನ್ನೂರ ಜಲಾಲ ಸಹೇಬ ಹಾಗೂ ಅನಾಮಧೇಯ ಶಿಷ್ಯರ ತತ್ವಪದಗಳ ಉಲ್ಲೇಖವಿದ್ದು ಹೆಣ್ಣಿನ ಕುರಿತು ವಿವರಿಸುವ ಸಿದ್ಧಾಂತ ಬೋಧನೆಯ ಪದಗಳು ಈ ಕೃತಿಯಲ್ಲಿ ದೊರೆಯುತ್ತವೆ.

ಡಾ. ವಿಜಯಶ್ರೀ ಸಬರದ ಅವರು ಸಂಪಾದಿಸಿರುವ "ಗುರು ಶಿಷ್ಯರ ತತ್ವಪದಗಳು"[೧೯೯೭]ಈ ಕೃತಿಯಲ್ಲಿ ರಾಯಚೂರು ಜಿಲ್ಲೆಯ ದಲಿತ ತತ್ವಪದಕಾರರಾದ ಹೊಸುರು ತಿಪ್ಪಣ್ಣ, ತಿಪ್ಪಣ್ಣ ತಾತಾ, ಯರಮಾರೆಪ್ಪ, ಕಲ್ಮಲಾ ತಾಯಣ್ಣರವರ ಜೀವನ ವೃತ್ತಾಂತದ ವಿವರಣೆ ಇದ್ದು, ಇವರು ಸಂಸಾರದೊಳಗೆ ಇದ್ದುಕೊಂಡು ಮುಕ್ತಿ ಬಯಸುವ ಇವರ ನಡೆ ಹಾಗೂ ಸಮಾಜವು ಸಂಸ್ಕೃತಿ, ಸಂಪ್ರಾದಯದ ಕಟ್ಟಳೆಗಳಲ್ಲಿ ಹೆಣ್ಣನ್ನು ಕಟ್ಟಿಹಾಕಿರುವುದರ ವಿರುದ್ಧ ತಮ್ಮ ತತ್ವಪದಗಳ ಮೂಲಕ ದನಿ ಎತ್ತಿರುವ ವಿಮರ್ಶಾತ್ಮಕ ದೃಷ್ಟಿಕೊನ ನೆಲೆಯ ತತ್ವಪದಗಳಿರುವುದು ಗಮನಾರ್ಹ.

ಡಾ. ಬಸವರಾಜ ಪೋಲಿಸ್ ಪಾಟೀಲರವರ "ಅಮರ ಜಾನಪದ"[೨೦೦೪] ಈ ಕೃತಿಯಲ್ಲಿ 'ಹೈದ್ರಾಬಾದ್ ಕರ್ನಾಟಕ ತತ್ವಪದಗಳ ಸಾಹಿತ್ಯ' ಎಂಬ ಶೀರ್ಷಿಕೆಯಡಿಯಲ್ಲಿ 'ಮಾನವ ಜನ್ಮಕ್ಕೆ ತಾಯಿಯ ಕೊಡುಗೆ ಎಂತಹದ್ದು' 'ತಾಯಿಗೆ ಸಮಾಜದಲ್ಲಿ ನೀಡುವ ಮಹತ್ವ' ಹಾಗೆ ತಾಯಿಯ ವ್ಯಕ್ತಿತ್ವದ ದರ್ಶನ ಮೂಡಿಸುವ ತತ್ವಪದಗಳು ಮತ್ತು ಆದರ್ಶ ಪತ್ನಿ ಹೇಗಿರಬೇಕೆಂದು, 'ಹೆಣ್ಣು ಜಗದ ಕಣ್ಣು' ಎಂಬ ಪದದಲ್ಲಿ ವಿವರಿಸಿದ್ದು, ಸಮಾಜಕ್ಕೆ ತತ್ವಪದಗಳು ಉಪದೇಶ ನೀಡುತ್ತಾ ನೈತಿಕ ಸಂಪತ್ತನ್ನು ಬೆಳಸಲು ಸಹಕರಿಸಿದಂತಿದೆ. ಹೆಣ್ಣು ಗರತಿ, ಮಾನವತಿ, ಪುಣ್ಯವತಿ, ಭಾಗ್ಯವತಿಯಾಗಬೇಕಾದರೆ ಸದ್ಗುಣ ಸಂಪನ್ನಳಾಗಿರಬೇಕೆಂದು ನಿರ್ಧೇಶಿಸುತ್ತಾರೆ.

ಈ ಮೇಲಿನ ವಿವಿಧ ರೀತಿಯ ಸಂಶೋಧನಾ ಅಧ್ಯಯನ ಕ್ರಮಗಳು ಇದುವರೆಗು ಕನ್ನಡ ತತ್ವಪದ ಸಾಹಿತ್ಯದ ಬಗೆಗೆ ನಡೆದಿರುವ ಅಧ್ಯಯನಗಳಾಗಿವೆ. ಯಾವುದೇ ಒಂದು ಪರಿಕಲ್ಪನೆಯನ್ನು ಇರಿಸಿಕೊಂಡು ಅಧ್ಯಯನಗಳು ಈವರೆಗು ನಡೆದಿಲ್ಲ ಈ ದೆಸೆಯಿಂದ ಈ ಮಹಾಪ್ರಬಂಧದಲ್ಲಿ 'ಮಹಿಳಾ ಸಂವೇದನೆಯ ಸ್ವರೂಪ'ವನ್ನು ಪ್ರಮುಖವಾಗಿ ಇರಿಸಿಕೊಂಡು ಕನ್ನಡ ತತ್ವಪದಗಳನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಕನ್ನಡ ಅನುಭವ ಪರಂಪರೆಗಳಾದ ವಚನ ಸಾಹಿತ್ಯದಲ್ಲಿ ಕೀರ್ತನ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ ಸ್ವರೂಪದ ಅಧ್ಯಯನಗಳು ನಡೆದಿವೆ. ಅಕ್ಕಮಹಾದೇವಿ ವಚನಗಳು, ಕನಕದಾಸರ ಕೀರ್ತನೆಗಳು ಮುಂತಾದ ಭಕ್ತಿಪಂಥಗಳಲ್ಲಿ ಮಹಿಳಾ ಸಂವೇದನ ಅಧ್ಯಯನಗಳು ತತ್ವಪದಗಳನ್ನು ಮಹಿಳಾ ಸಂವೇದನೆಯ ಸ್ವರೂಪದ ಹಿನ್ನಲೆಯಲ್ಲಿ ಇರಿಸಿಕೊಂಡು ಮಾಡಲಾಗಿರುವ ಈ ಅಧ್ಯಯನಕ್ಕೆ ಸಹಜವಾಗಿ ಮಹತ್ವವಿದೆ.

ಅಧ್ಯಯನದ ವೈಧಾನಿಕತೆ

'ಕನ್ನಡ ತತ್ವಪದಗಳಲ್ಲಿ ಮಹಿಳಾ ಸಂವೇದನೆಯ ಸ್ವರೂಪ' ಎಂಬ ಸಂಶೋಧನಾ ಮಹಾಪ್ರಬಂಧದ ಅಧ್ಯಯನಕ್ಕಾಗಿ ಒಟ್ಟು ಏಳು ಅಧ್ಯಯಗಳನ್ನು ಹಾಕಿಕೊಳ್ಳಲಾಗಿದೆ. ಮಹಿಳಾ

ಸಂವೇದನೆ ಪರಿಕಲ್ಪನೆಯಲ್ಲಿ ವಿವಿಧ ಆಯಾಮ\ಮಗ್ಗಲುಗಳಲ್ಲಿ ತತ್ವಪದಕಾರರು\ತತ್ವಪದಗಾರ್ಥಿಯರು ಹೇಗೆ ಚಿತ್ರಿಸಿದ್ದಾರೆ? ಮಹಿಳೆಯನ್ನು ಕುರಿತು ಪದಗಳನ್ನು ಹಾಡುವಾಗ ಅವರು ತಾಳುವ ನಿಲುವುಗಳು? ಅವುಗಳ ಅನುಭವ ಅಥವಾ ಸಾಂದರ್ಭಿಕ ಸ್ವರೂಪವು ಎಂತಹದು? ಎನ್ನುವ ಪ್ರಶ್ನೇಯನ್ನು ಹಾಕಿಕೊಂಡು ಈ ಸಂಶೋಧನೆಯನ್ನು ಮಾಡಲಾಗಿದೆ. ಪ್ರಭುತ್ವ, ಧಾರ್ಮಿಕ, ಸಾಮಾಜಿಕ, ಅನುಭಾವ, ಪುರಾಣ, ಸಾಹಿತ್ಯ, ಮುಂತಾದ ನೆಲೆಗಳಲ್ಲಿ ಮಹಿಳಾ ಚಿತ್ರಣ, ಅವುಗಳನ್ನು ತತ್ವಪದಕಾರರು ಗ್ರಹಿಸಿ ತತ್ವಪದಗಳನ್ನು ಹೇಳಿ ಸಮಾಜಕ್ಕೆ ಮಹಿಳಾ ರೂಪಕವಾಗಿ ನೀಡಿರುವ ಸಾಂಸ್ಕೃತಿಕ ಸಂದರ್ಭದ ವಿವರಣೆಯನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗುವ ಪ್ರಮುಖ ಉದ್ದೇಶವಿದೆ. ಅಧ್ಯಯನದ ವೈಧಾನಿಕ ವಿಧಾನ ಈ ಮುಂದಿನಂತಿದೆ.

- **"ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ"** ಈ ಅಧ್ಯಯದಲ್ಲಿ ಸಂಶೋಧನೆಯ ಉದ್ದೇಶವನ್ನು ಹೇಳಲಾಗುತ್ತದೆ. ೧೭ನೇ ಶತಮಾನದಿಂದ ೨೦ನೇ ಶತಮಾನದವರೆಗಿನ ತತ್ವಪದಕಾರರ ತತ್ವಪದಗಳನ್ನು ವ್ಯಾಪ್ತಿಯೊಳಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಈ ಅಧ್ಯಯದಲ್ಲಿ ಸಾಂಸ್ಕೃತಿಕ ಮಾದರಿಯನ್ನು ಅನುಸರಿಸಿದ್ದೇನೆ.
- **ಅಧ್ಯಾಯ – ೧ "ಮಹಿಳಾ ಸಂವೇದನೆ : ತಾತ್ವಿಕ ವಿವೇಚನೆ"** ಪ್ರಸ್ತುತ ಅಧ್ಯಯದಲ್ಲಿ ಮಹಿಳಾ ಸಂವೇದನೆ ತಾತ್ವಿಕತೆಯಲ್ಲಿ ಬರುವ ವಿಚಾರಗಳ ಬಗ್ಗೆ ಚೆರ್ಚೆಮಾಡಲಾಗುತ್ತದೆ. ನಿಸರ್ಗ ಸಹಜ ಕ್ರಿಯೆಯಾದ ಜೈವಿಕಕ್ರಿಯೆ ಮನೋ ಕಾಮನೆಗಳಂದ ಬೆಸತ್ತ ಮಹಿಳಾ ಮನೋಮೀಮಾಂಸೆಯ ಚರ್ಚೆ, ಆರ್ಥಿಕ ಸ್ಥಿತಿಗತಿಗಳಲ್ಲಿ ಮಹಿಳಾ ಪಾತ್ರ ಕೌಟುಂಬಿಕ ನೆಲೆಯಲ್ಲಿ ಹೆಣ್ಣಿನ ಹಾಜರಿ ಆಡಳತ ವ್ಯವಸ್ಥೆ ಮತ್ತು ಧಾರ್ಮಿಕ ಪ್ರಭುತ್ವದಲ್ಲಿ ಸ್ತ್ರೀಯರನ್ನು ಅರಿತಿರುವ ರೀತಿ, ಭಕ್ತಿಪಂಥಗಳಲ್ಲಿ ನೆಲೆಗೊಂಡು ಮಹಿಳಾ ಸ್ಥಾನಮಾನಗಳನ್ನು ಕೂಲಂಕುಶವಾಗಿ ಚರ್ಚೆ ಮಾಡಲಾಗಿದೆ. ಸಮಾಜದಲ್ಲಿ ಮಹಿಳೆಯರು ಅನೇಕ ಬಗೆಯ ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ, ವಿವಿಧ ಬಗೆಯ ಶೋಷಣೆಯ ಕೂಪದೊಳಗೆ ಸಿಲುಕಿ ನಲುಗಿಹೋಗಿದ್ದಾರೆ. "One is not born a woman one becomes one"[೧], ಅಂದರೆ ಯಾರೂ ಹೆಣ್ಣು ಎಂಬುದಾಗಿ ಜನ್ಮ ಪಡೆಯುವುದಿಲ್ಲ ಆದರೆ ಅನಂತರ ಅವಳನ್ನು ಹೆಣ್ಣಾಗಿ ರೂಪಿಸಲಾಗುತ್ತದೆ. ಎಂದು ಸಿಮೋನ್ ದಿ ಬೋವಾ ಹೆಣ್ಣಿನ ಪರಿಸ್ಥಿತಿಯನ್ನು ದಿ ಸೆಕೆಂಡ್ ಸೆಕ್ಸ್ ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಪ್ರತಿಯೊಬ್ಬ ಹೆಣ್ಣು ಗಂಡಿನಲ್ಲೂ ಸ್ತ್ರೀಮನಸ್ಸು, ಪುರುಷ ಮನಸ್ಸು ಇರುತ್ತದೆ. ಸಮಾಜದ ಕಟ್ಟುಪಾಡುಗಳೊಳಗೆ ಸಿಲುಕಿದ ಸ್ತ್ರೀಪುರುಷರು, ಹೆಣ್ಣು ಮನಸ್ಸನ್ನು ತೋರಿದರೆ ಗಂಡು ಹೆಣ್ಣಿಗನಾಗುವ ಭಯದಲ್ಲಿ ಅದೇ ಸ್ತ್ರೀ ತನ್ನ ಗಂಡುಬೀರಿತನವನ್ನು ತೋರಿ 'ಗಂಡುಭೀರಿ' ಎನಿಸಿಕೊಳ್ಳುವ ಭೀತಿಯಲ್ಲಿ ಹೆಣ್ಣುಗಂಡುಗಳು ಪರಿಸರದೊತ್ತಡಕ್ಕೆ ಒಪ್ಪಿಸಿಕೊಂಡು

ಕಲ್ಪಿತ ಸೀಮೆಯೊಳಗೆ ಜೀವನ ನಡೆಸುತ್ತಿರುವರು. ಮಹಿಳಾ ಅನುಭವಗಳು ಮತ್ತು ಮಹಿಳಾ ನಿಲುವುಗಳ ಆಧಾರದ ಮೇಲೆ ಮಹಿಳಾ ಸಂವೇದನಾಶೀಲ ವಿಚಾರಗಳನ್ನು ಅರಿಯಬಹುದು. ಹೆಣ್ಣಿನ ಜನನ ಕ್ರೀಯೆಯಿಂದಲೆ ಆರಂಭವಾಗುವ ಪುರುಷ ಅಧಿಕಾರ ಮಹಿಳೆಯನ್ನು ಹಂತ ಹಂತವಾಗಿ ತನ್ನ ತೆಕ್ಕೆಯೊಳಗೆ ಆಕ್ರಮಿಸಿಕೊಂಡು ಪುರುಷರು ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ. ಹಿಂದೂ ಧರ್ಮವನ್ನು ಪ್ರತಿನಿಧಿಸುವ ಋಗ್ವೇದ ಗ್ರಂಥದಲ್ಲಿ "ಮಗು ಹುಟ್ಟುವಾಗ ಗಂಡನ್ನು ಹೆಣ್ಣು ಮಾಡದಿರಲಿ" ಎಂಬರ್ಥದ ಪ್ರಾರ್ಥನೆಯಿದೆ ಈ ಸಾಲುಗಳಿಂದ ತಿಳಿಯಬಹುದು ಹೆಣ್ಣಿನ ವಿಚಾರದಲ್ಲಿ ತಾತ್ಸರ ಭಾವನೆ ಶತಶತಮಾನಗಳಿಂದಲೂ ರೂಡಿಯಲ್ಲಿದ್ದು ಬದುಕಿನ ಒಂದು ಭಾಗವಾಗಿರುವ ಸ್ತ್ರೀಯರ ಪರಿಸ್ಥಿತಿ ಚಿಂತಾಜನಕವಾಗಿತ್ತು. ಜಗತ್ತಿನ ಆರಂಭಕಾಲದಲ್ಲಿ ಸ್ತ್ರೀಪುರುಷರಲ್ಲಿ ಭೇಧಭಾವವಿರಲಿಲ್ಲ ಕೃಷಿ ಉತ್ಪಾದನೆ ಹಾಗೂ ಮಾನವಕೃಷಿ ಉತ್ಪಾದನೆ ಹಾಗೂ ಮಾನವ ಉತ್ಪಾದನೆಗಳನ್ನು ಏಕಕಾಲದಲ್ಲಿ ನಿರ್ವಹಿಸಿದ ಹೆಣ್ಣನ್ನು ಭೂಮಿ ತಾಯಿಯೊಂದಿಗೆ ಸಮೀಕರಿಸಲಾಯಿತು. ಪ್ರಾಚೀನ ಕಾಲಘಟ್ಟಗಳಲ್ಲಿ ಶ್ಲೀಲ-ಅಶ್ಲೀಲ, ಪವಿತ್ರ ಅಪವಿತ್ರ ಎಂಬ ಭಾವನೆ ಪುರುಷರಿಗಿರಲಿಲ್ಲ ಸ್ತ್ರೀಯರು ಬೆತ್ತಲಾಗಿಯೆ ಭೂ ಉಳುಮೆ ಕಾರ್ಯದಲ್ಲಿ ತೊಡಗಿ ಕೃಷಿಯಲ್ಲಿ ನೈಪುಣ್ಯತೆ ಹೊಂದಿರುವುದರ ಜೊತೆಯಲ್ಲಿಯೆ ಪ್ರಜನನೋತ್ಪಾದನೆಯ ಶಕ್ತಿ ಪಡೆದು ಪುರುಷ ಸಮಾಜದ ಗೌರವಕ್ಕೆ ಪಾತ್ರಳಾಗಿದ್ದಳು. ಅಂದಿನ ನಗ್ನ ಚಿತ್ರಗಳೇ ಶೀಲ-ಅಶ್ಲೀಲ, ಪವಿತ್ರ ಅಪವಿತ್ರ ಮನಸ್ಥಿತಿ ಸ್ತ್ರೀ-ಪುರುಷರಲ್ಲಿ ನೆಲೆಗೊಂಡಿರಲಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ಕಾಲದಲ್ಲಿ ಸ್ತ್ರೀಯ ಜೀವಪೋಷಕ ಜೈವಿಕ ಗುಣಲಕ್ಷಣಗಳಾಗಿಯಷ್ಟೇ ಬಿಂಬಿತವಾಗಿದೆ. ಜಾನಪದದ ಹಿನ್ನಲೆಯಲ್ಲಿ ಹೆಣ್ಣು ಮಾತೃತ್ವದ ಕಲ್ಪನೆ ಸೊಗಸಾಗಿ ಮೂಡಿಬಂದಿದೆ, "ಜಗವ-ಬೆಳಗುವ ಸೂರ್ಯ ಸಂಜೆವೇಳೆಗೆ ತಾಯಿಯ ಹೊಟ್ಟೆ ಸೇರಿ ಮತ್ತೆ ಬೆಳಗ್ಗೆ ಹುಟ್ಟಿಬರುತ್ತಾನೆ ಪ್ರತಿದಿನ ನಿಸರ್ಗ ಸಹಜಗುಣ ಸೂರ್ಯನ ಚಟುವಟಿಕೆಯನ್ನು ಜಾನಪದರು ಮಾತೃತ್ವದ ಕಲ್ಪನೆಯಲ್ಲಿ ಹೇಳಿದ್ದಾರೆ". ಎಲ್ಲಮ್ಮನ ವಂಶಸ್ಥರು ಪುರುಷರು ಹೆಣ್ಣಿನರೂಪ, ಚಹರೆ, ಗುಣಗಳನ್ನು ಹೊಂದಿ ಆರಾಧನೆ ನೆಡೆಸುತ್ತಾ ಮುಂದೆ ಕ್ರಮೇಣ ದೈವದೊಟ್ಟಿಗೆ ಹೆಣ್ಣಾಗಿ ನಟಿಸಿದ ಗಂಡು ಪುರುಷದೈವವಾಗಿ ಸೃಷ್ಟಿಗೊಂಡು ಆ ಹೆಣ್ಣು ದೈವಗಳ ಪತಿಯಾಗಿ ಕಾಣಿಸಿಕೊಂಡರು ಆ ಸಂದರ್ಭದಲ್ಲಿ ಪಿತೃಪ್ರಾಧಾನ ವ್ಯವಸ್ಥೆಯ ಹುಟ್ಟಿಗೆ ಕಾರಣವಾಯಿತೆಂದು ಹೇಳಬಹುದು. ಮಹಿಳೆಯು ತಮ್ಮ ಔಪಚಾರಿಕ ಮತ್ತು ಅನೌಪಚಾರಿಕ ಜೀವನದಲ್ಲಿ ಎದುರಿಸುತ್ತಿರುವ ಸವಾಲುಗಳು, ಸಮಸ್ಯೆಗಳಿಗೆ ಕಾರಣಕರ್ತವಾಗಿ ಧರ್ಮ ಗ್ರಂಥಗಳು ಹುಟ್ಟಿ ಹೆಣ್ಣನ್ನು ಪುರುಷರು ಹಿಡಿತದಲ್ಲಿರುವಂತೆ ಮಾಡಿದವು ಎಂದರೆ ತಪ್ಪಗಲಾರದು. "ನಿಮ್ಮ ಹೆಂಗಸರು ನಿಮ್ಮ ಹೊಲಗಳಂತೆ" ಕುರಾನ್ ಗ್ರಂಥದಲ್ಲಿ ಹೇಳಲಾಗಿದೆ. ಅದೇರೀತಿ ಮನುಸ್ಮೃತಿಯಲ್ಲಿ "ಹೆಣ್ಣನ್ನು ಕ್ಷೇತ್ರ (ಹೊಲ)ವೆಂದು ಗಂಡನ್ನು ಬೀಜದಾಯಕವೆಂದು

ಕರೆದಿರುವ ಉದಾಹರಣೆಗಳವೆ. ಪ್ರಸ್ತುತ ಅಧ್ಯಾಯದಲ್ಲಿ ಮಹಿಳಾ ಸಂವೇದನೆ ತಾತ್ವಿಕತೆಯಲ್ಲಿ ಬರುವ ವಿಚಾರಗಳ ಬಗ್ಗೆ ಚರ್ಚೆಮಾಡಲಾಗುತ್ತದೆ. ನಿಸರ್ಗ ಸಹಜ ಕ್ರೀಯೆಯಾದ ಜೈವಿಕಕ್ರೀಯೆ ಮನೋ ಕಾಮನೆಗಳಂದ ಬೆಸತ್ತ ಮಹಿಳಾ ಮನೋಮೀಮಾಂಸೆಯ ಚರ್ಚೆ, ಆರ್ಥಿಕ ಸ್ಥಿತಿಗತಿಗಳಲ್ಲಿ ಮಹಿಳಾ ಪಾತ್ರ ಕೌಟುಂಬಿಕ ನೆಲೆಯಲ್ಲಿ ಹೆಣ್ಣಿನ ಹಾಜರಿ ಆಡಳತ ವ್ಯವಸ್ಥೆ ಮತ್ತು ಧಾರ್ಮಿಕ ಪ್ರಭುತ್ವದಲ್ಲಿ ಸ್ತ್ರೀಯರನ್ನು ಅರಿತಿರುವ ರೀತಿ, ಭಕ್ತಿಪಂಥಗಳಲ್ಲಿ ನೆಲೆಗೊಂಡು ಮಹಿಳಾ ಸ್ಥಾನಮಾನಗಳನ್ನು ಕೂಲಂಕುಶವಾಗಿ ಚರ್ಚೆ ಮಾಡಲಾಗುತ್ತದೆ. ಮಹಿಳೆ ಬಲಹಿನಳಲ್ಲ ಶಕ್ತಿದಾಯಕಳಾದರು ಬದುಕು ಅವಳನ್ನು ಬಲಹಿನಳನ್ನಾಗಿ ಮಾಡಿದೆ. ಸಮಾಜದ ರೀತಿ-ರಿವಾಜುಗಳ ಹೇರಿಕೆ ಸ್ತ್ರೀಯನ್ನು ತಳಮಟ್ಟಕ್ಕೆ ತಳ್ಳಲ್ಪಟ್ಟಿದೆ.

- **ಅಧ್ಯಾಯ – ೨ "ತತ್ವಪದಗಳಲ್ಲಿ ಮಹಿಳಾ ಪಾತ್ರ ಚಿತ್ರಣ"** ಅಧ್ಯಯದಲ್ಲಿ ಸಮಾಜದ ಕುರಿತು ನೀತಿ ತತ್ವಗಳನ್ನು ಹೇಳುವಾಗ ಮಹಿಳೆಯನ್ನು ರೂಪಕವಿರಿಸಿ ತತ್ವಪದಕಾರರು ಪದಗಳನ್ನು ಕಟ್ಟಿರುತ್ತಾರೆ. ದೇವತೆಯನ್ನು ಸ್ತುತಿಸುವುದು. ಸಂಸಾರದಲ್ಲಿ ಹೆಣ್ಣು ತನ್ನ ಜೀವಿತಾವಧಿಯಲ್ಲಿ ಮಗಳು, ಹೆಂಡತಿ, ತಾಯಿ, ಅಕ್ಕ-ತಂಗಿ, ಅತ್ತೆ-ಸೋಸೆ, ಅಜ್ಜಿ ಮುಂತಾದ ಪದಗಳು ಮತ್ತು ಜಾತಿಯೊಳಗೆ, ಧರ್ಮದ ಪರಿಕಲ್ಪನೆಯಲ್ಲಿ ಮಹಿಳೆ ಪರಿಕಲ್ಪನೆಯನ್ನು ಹಾಗೂ ಸಾಹಿತ್ಯಕವಾಗಿ ಮಹಿಳಾ ರೂಪಕಗಳನ್ನು ಈ ಅಧ್ಯಯದಲ್ಲಿ ಹೇಳಲಾಗಿದೆ. ಪ್ರಸ್ತುತ ತತ್ವಪದಕಾರರ ರಚನೆಗಳಲ್ಲಿ ಮಹಿಳಾ ಪಾತ್ರ ಚಿತ್ರಣ ಎಂಬ ಅಧ್ಯಯದಲ್ಲಿ ಶಿಶುನಾಳ ಶರೀಫರು, ಕೂಡವಾರು ಬಸವಲಿಂಗರು, ಸಾಯಿಬಣ್ಣ, ಕಡಕೋಳು ಮಡಿವಾಳಪ್ಪ, ತುರುವನೂರು ಲಿಂಗಾರ್ಯ, ಚಿದಾನಂದಾವಧೂತರು, ವಂಗಿ ಚಂದ್ರಮ ಸಿದ್ಧಪ್ರಭುಗಳು ಸೇರಿದಂತೆ ಹಲವಾರು ತತ್ವಪದಕಾರರನ್ನು ಅಧ್ಯಯನ ಮಾಡಿ ಚರಿತೆ, ಪುರಾಣ, ಸಾಹಿತ್ಯಿಕ ನೆಲೆಯಲ್ಲಿ ಮಹಿಳಾ ಪಾತ್ರಗಳನ್ನು ಚಿತ್ರಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ. ಚರಿತ್ರೆ ಎಂದರೆ ಸಾಮಾನ್ಯವಾಗಿ ಜನಸಾಮಾನ್ಯರೊಡನೆ ಬದುಕಿನ ಕ್ಷಣಗಳನ್ನು ಕಂಡು ಹಲವು ರೀತಿಯ ಕಷ್ಟ, ದು:ಖ, ಶೋಷಣೆಗಳನ್ನು ಅನುಭವಿಸಿದರು. ತಮ್ಮ ಅಚಲವಾದ ಮನೋಸ್ಥೈರ್ಯದಿಂದ, ದೈವಭಕ್ತಿಯಿಂದ ಸಾಧನೆ ಮಾಡಿ ಲೋಕದಲ್ಲಿ ಕೀರ್ತಿ ಪಡೆದು ಜನಮಾನಸದಲ್ಲಿ ಉಳಿದ ಮಹಿಳೆಯರನ್ನು ಚಾರಿತ್ರಿಕ ಮಹಿಳೆಯರು ಎಂದು ಕರೆಯುತ್ತಾರೆ. ಅದರಂತೆ ಚರಿತ್ರೆಯಲ್ಲಿ ಬಂದು ಹೋದ ಮಹಿಳೆಯರನ್ನು ಇಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿದೆ. ಮುಂದುವರೆದ ಭಾಗವಾಗಿ ಶ್ರೇಷ್ಠ ಕಾವ್ಯಗಳಾದ ರಾಮಯಣ, ಮಹಾಭಾರತ ಕೃತಿಗಳಲ್ಲಿ ಉಲ್ಲೇಖಿಸಿರುವ ಸ್ತ್ರೀಪಾತ್ರಗಳ ಸಹಾಯದಿಂದ ಲೋಕಸಂಚಾರಿಗಳಾದ ತತ್ವ ಪದಕಾರರು ಮಹಿಳಾ ಬದುಕನ್ನು ಸರಿಪಡಿಸಲು ಅಥವಾ ಪುರಾಣ ಸ್ತ್ರೀಯರ ಉಲ್ಲೇಖದಿಂದ ಆದುನಿಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ. ಅಂತಹ

ಮಹಿಳಾ ಪಾತ್ರಗಳ ವಿಶ್ಲೇಷಣೆಯನ್ನು ವಿಮರ್ಶಾತ್ಮಕವಾಗಿ ನಿರೂಪಿಸಲಾಗಿದೆ. ಹಾಗೂ ಚರಿತ್ರೆ, ಪುರಾಣ ಕಾವ್ಯಗಳ ಸ್ತ್ರೀ ಪಾತ್ರಗಳಂತೆ, ಶೋಷಿತರ ದನಿಯಾಗಿ ನಿಂತ ಮಹಿಳಾ ಸಾಹಿತಿಗಳನ್ನು ತತ್ವಪದಕಾರರು ನೆನೆದಿದ್ದಾರೆ. ಸಮಾಜದ ಕಟ್ಟುಪಾಡು, ಸಂಪ್ರಾದಾಯಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಬುಡಮೇಲು ಮಾಡಿದ ಮಹಿಳಾ ಸಾಹಿತಿಗಳನ್ನು ತತ್ವಪದಗಳಲ್ಲಿ ಕಾಣಬಹುದು. ಒಟ್ಟಿನಲ್ಲಿ ಚರಿತ್ರೆಯಲ್ಲಿ ಬಂದು ಹೋದ ಮಹಿಳೆಯರು ಪುರಾಣ ಕಾವ್ಯಗಳಲ್ಲಿ ಚಿತ್ರಿತವಾದ ಸ್ತ್ರೀವರ್ಗ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಸ್ತ್ರೀಯರನ್ನು ಪ್ರತಿನಿಧಿಸುವ ತತ್ವಪದಗಳನ್ನು ಬಳಸಿಕೊಂಡು ಈ ಅಧ್ಯಾಯವನ್ನು ಈ ಮುಂದಿನಂತೆ ಸಿದ್ಧಪಡಿಸಲಾಗಿದೆ.

- **ಅಧ್ಯಾಯ – ೩ "ತತ್ವಪದಗಳಲ್ಲಿ ಮಹಿಳಾ ತಾತ್ವಿಕ ಸ್ವರೂಪ"** ಅಧ್ಯಯದಲ್ಲಿ ಹೆಣ್ಣು ಹುಟ್ಟಿನಿಂದಲೆ ತನ್ನ ಲಿಂಗತ್ವದ ವಿಚಾರವಾಗಿ ಮುಜುಗರಗಳಿಂದಲೆ ಅವಳು ಪುರುಷ ಸಮಾಜದ ತುಳಿತಕ್ಕೆ ಒಳಗಾಗುತ್ತಾಳೆ. ಇಲ್ಲಿ ತತ್ವಪದಕಾರರು ಮಹಿಳೆಯ ಜೈವಿಕ ಸ್ವರೂಪವನ್ನು ನೇರವಾಗಿಯೇ ಪದಗಳ ಮೂಲಕ ಚಿತ್ರಿಸುತ್ತಾರೆ. ಹಾಗೆ ಅವಳು ಅನುಭವಿಸಿದ ಮಾನಸಿಕ ನೋವುಗಳ ತುಡಿತಗಳು ಲಿಂಗತ್ವದಿಂದ ಉಂಟಾಗುವ ತಾರತಮ್ಯದ ನೀತಿ, ಹಾಗೆ ದೇಹಮೀಮಾಂಸೆ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ. ಪ್ರಸ್ತುತ ಅಧ್ಯಾಯದಲ್ಲಿ ಮಹಿಳಾಚಿಂತನೆಯ ತಾತ್ವಿಕ ವಿಚಾರಗಳಾದ ದೇಹಮೀಮಾಂಸೆ, ಮನೋಮೀಮಾಂಸೆ, ಜೈವಿಕ ಮೀಮಾಂಸೆಯನ್ನು ತತ್ವಪದಕಾರರ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರು, ತುರುವನೂರು ಲಿಂಗಾರ್ಯ, ಗಬ್ಬೂರ ಹಂಪಣ್ಣ, ರಾಂಪುರ ಬಕ್ಕಪ್ಪ, ಸಕ್ರಪ್ಪತಾತ, ಹೊಳಕುಂದ ಶರಣಕವಿ, ಬಿದನೂರಿನ ಗಂಗಮ್ಮ ಫೈಮುದಾ ಫಾತಿಮಾ, ಶಂಕರಾನಂದ ತತ್ವಪದಕಾರರನ್ನು ಸೇರಿದಂತೆ ಹಲವು ಬಿಡಿ ಪದಗಳು ಅಜ್ಞಾತ ತತ್ವಪದಕಾರರನ್ನು ಅನುಸರಿಸಿ ಅವರ ತತ್ವಪದಗಳನ್ನು ಅನುಲಕ್ಷಿಸಿ ಮಹಿಳೆಯ ತಾತ್ವಿಕ ಸ್ವರೂಪವನ್ನು ವಿಮರ್ಶಾತ್ಮಕವಾಗಿ ವಿವೇಚಿಸಲಾಗಿದೆ. ಆಧುನಿಕ ಸಮಾಜದಲ್ಲಿ ಪುರುಷ ನಿರ್ಮಿತ ಸಮಾಜ ಚಾಲ್ತಿಯಲ್ಲಿದೆ. ಮಹಿಳೆಯರನ್ನು ಅವರ ಜೈವಿಕ ಕಾರಣಗಳಿಂದಲೋ ಹೆಣ್ಣು ಎಂಬ ಕಾರಣಕ್ಕೋ ಅವಳನ್ನು ಎರಡನೇ ದರ್ಜೆಯವಳನ್ನಾಗಿ ಕಾಣಲಾಗುತ್ತಿದೆ. ಸಂಪ್ರದಾಯದ ಕಟ್ಟುಪಾಡುಗಳೊಳಗೆ ಸಾಂಸ್ಕೃತಿಕವಾಗಿ ಮಹಿಳೆಯನ್ನು ಸಿಲುಕಿಸಿ ಶೋಷಣೆಗೆ ಒಳಗುಮಾಡಿರುವ ಪುರುಷ ಸಮಾಜವನ್ನು ತತ್ವಪದಕಾರರು ತರಾಟೆಗೆ ತೆಗೆದುಕೊಂಡಿದ್ದಾರೆ ಮತ್ತು ನೈತಿಕ ಅನೈತಿಕ ವಿಚಾರಗಳನ್ನು ಪ್ರಸ್ತಾಪಿಸುವಾಗ ಮಹಿಳೆಯರನ್ನೆ ಕೇಂದ್ರಿಕರಿಸಿ ದೂಷಣೆ ಮಾಡುವ ತತ್ವಪದಗಳು ಉಲ್ಲೇಖಗೊಂಡಿವೆ. ಜೊತೆಗೆ ಅವಳ ಮಾನಸಿಕ ತುಮುಲಗಳನ್ನು ಅರ್ಥೈಸಿಕೊಳ್ಳದೆ ಟೀಕೆ ಮಾಡುವುದು ಜೈವಿಕ ವಿಚಾರದಲ್ಲಿ ರಾಜಕೀಯ ಮಾಡುವ ಪುರುಷ ಸಮಾಜದ ಹೊಳಹುಗಳು ಇಲ್ಲಿ ವಿಮರ್ಶೆಗೊಂಡಿವೆ. ದೈಹಿಕ ವಿಚಾರದಲ್ಲಿ ಮಹಿಳೆಯನ್ನು

ಕೇಂದ್ರಿಕರಿಸಿ ಮಹಿಳೆಯರನ್ನು ನಿರೂಪಿಸಿರುವುದು, ಜೈವಿಕ ಕ್ರಿಯೆಯಲ್ಲಿ ಮಹಿಳೆಯರನ್ನು ತುಚ್ಛವಾಗಿ ಕಾಣುವುದು ಮತ್ತು ಮಹಿಳೆಯರ ಮನಸ್ಸನ್ನು ಅರ್ಥೈಸಿಕೊಳ್ಳುವ, ಮಾನಸಿಕ ಸ್ಥಿತಿಗತಿಗಳನ್ನು ನಿರೂಪಿಸುವ ತತ್ವಪದಗಳನ್ನು ವಿಶ್ಲೇಷಣೆ ಮಾಡಲಾಗಿದೆ.

- **ಅಧ್ಯಾಯ – ೪ "ತತ್ವಪದಗಳಲ್ಲಿ ಮಹಿಳೆಯ ಸಂವೇದನೆಯ ನೆಲೆಗಳು"** ಅಧ್ಯಯದಲ್ಲಿ ಮಹಿಳೆ ತನ್ನ ಜನನದಿಂದಲೆ ಸಮಾಜದ ಸಮುದಾಯದೊಳಗೆ ಸಿಲುಕಿಕೊಂಡು ಹಂತ–ಹಂತವಾಗಿ ಭೌದ್ಧಿಕವಾಗಿ ಮಾನಸಿಕವಾಗಿ ವಿಕಾಸ ಹೊಂದಿದಂತೆ ಸಮಾಜದ ವಿವಿಧ ನೆಲೆಯಲ್ಲಿ ಗುರುತಿಸಿಕೊಳ್ಳುತ್ತಾಳೆ. ಇಲ್ಲಿ ತತ್ವಪದಕಾರರು ಮಹಿಳೆಯನ್ನು ಕೆಲವು ನೆಲೆಗಳಲ್ಲಿ ಒಬ್ಬರಿಗಿಂತ ಒಬ್ಬರು ಭಿನ್ನವಾಗಿ ಚಿತ್ರಿಸಿದ್ದು. ಅವರು ವಿವರಿಸುವ ವಿವಿಧ ನೆಲೆಗಳಲ್ಲಿ ಮಹಿಳಾ ಪರಿಕಲ್ಪನೆ ಕುರಿತು ಅಧ್ಯಾಯನ ನಡೆಸಲಾಗಿದೆ. ಪ್ರಸ್ತುತ ಅಧ್ಯಯದಲ್ಲಿ ಮಹಿಳಾ ಸಂವೇದನಾತ್ಮಕ ನೆಲೆಗಳಾದ, ಸೌಂದರ್ಯದ ನೆಲೆ, ವೈವಾಹಿಕ ನೆಲೆ, ಅನುಭೋಗದ ನೆಲೆ, ಅನುಭಾವದ ನೆಲೆಯಲ್ಲಿ ಮಹಿಳಾ ಸಂವೇದನೆಯನ್ನು ಸಾರುವ ತತ್ವಪದಗಳನ್ನು ಗಮನದಲ್ಲಿರಿಸಿಕೊಂಡು, ಇಲ್ಲಿ ಚರ್ಚಿಸಲಾಗಿದೆ. ಪುರುಷ ಮಹಿಳಾ ತತ್ವಪದಕಾರರ ತತ್ವಪದಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಕಡಕೋಳ ಮಡಿವಾಳಪ್ಪ, ದ್ಯಾಗಾಯಿ ಗುಂಡಪ್ಪ, ಕೃಷ್ಣಪ್ಪ, ಸಾವಳಗಿ ಮಹಮದ್ ಸಾಬ, ಕೂಡಲೂರು ಬಸವಲಿಂಗ, ರಾಚವ್ವ, ಹನುಮಂತವ್ವ, ಗಂಗಮ್ಮ, ಫಾತಿಮಾ, ಮುಂತಾದ ತತ್ವಪದಕಾರರ ತತ್ವಪದಗಳನ್ನು ಬಳಸಿಕೊಳ್ಳಲಾಗಿದೆ. ಶರೀಫರು ಸೇರಿದಂತೆ ಹಲವಾರು ತತ್ವಪದಕಾರರು ಹೆಣ್ಣಿನ ಸೌಂದರ್ಯವನ್ನು ಹಾಡಿ ಹೊಗಳಿದ್ದಾರೆ. ಅವಳ ಬಾಹ್ಯ ಸೌಂದರ್ಯವನ್ನು ಅವಳ ಉಡುಗೆ–ತೊಡುಗೆಗಳನ್ನು ಹೊಗಳುತ್ತಾ ಸೌಂದರ್ಯದ ಗಣಿ ಎಂದು ಸಂಬೋಧಿಸಿದ್ದಾರೆ. ಹೆಣ್ಣಾಗಿ ಹುಟ್ಟಿದ ಮೇಲೆ ಅವಳು ಮದುವೆಯಾಗಿ ಗಂಡನ ಮನೆಯಲ್ಲಿ ನಾನಾ ಪಾತ್ರಗಳಲ್ಲಿ ಬದುಕು ಮಾಡಬೇಕು. ಈ ಸಾಂಸಾರಿಕ ನೆಲೆಯಲ್ಲಿ ಹೆಣ್ಣು ಅನುಭವಿಸುವ ಕಷ್ಟಗಳು, ನಿರ್ವಹಿಸುವ ಜವಬ್ದಾರಿಗಳನ್ನು ಕೌಟುಂಬಿಕ ಹಿನ್ನಲೆಯಲ್ಲಿ ವಿಮರ್ಶೆ ಮಾಡಿರುತ್ತೇನೆ. ಉಪಭೋಗ ಎಂಬುದು ಹೆಣ್ಣು ಮತ್ತು ಗಂಡಿನ ಇಬ್ಬರ ಜೀವನದಲ್ಲಿ ನಡೆಯುವಂತೆ ಒಂದು ಪ್ರಕ್ರಿಯೆ. ಹೆಣ್ಣು. ತನ್ನ ಮನೋಇಚ್ಛೆಯಂತೆ ಗುರುವಿನೊಡನೆ ಅನುರಕ್ತಳಾದರೆ, ಪುರುಷ ತನ್ನ ಕಾಮದಾಸೆಗೆ ಒಳಗಾಗಿ ಮಹಿಳೆಯರೊಡನೆ ಅನೈತಿಕ ಚಟುವಟಿಕೆಯಲ್ಲಿ ತೊಡಗಿ ಭೋಗಿಯಾಗಿ ಬದುಕ ಹಾಳುಮಾಡಿಕೊಳ್ಳುತ್ತಾನೆ. ಇಲ್ಲಿ ಹೆಣ್ಣನ್ನು ಉದ್ದೇಶಿಸಿ ಭೋಗ ಜೀವನದಿಂದ ಬದುಕು ನಾಶವಾಗುತ್ತದೆ ಎಂದು ಉಪದೇಶ ನೀಡುವ ತತ್ವಪದಕಾರರು ಹೆಣ್ಣನ್ನು ಮಾಯೆ, ಮಾರಿ, ಎಂದೆಲ್ಲಾ ಟೀಕಿಸಿದ್ದಾರೆ. ಮಹಿಳಾ ತತ್ವಪದಕಾರ್ತಿಯರು ತಮ್ಮ ಜೀವನದಲ್ಲಿ ಕಂಡುಂಡ ಅನುಭವಗಳನ್ನು ಅನುಭಾವಿಕ ನೆಲೆಯಲ್ಲಿ

ಹಾಡಿ ಸಮಾಜದ ಕಟ್ಟುಪಾಡುಗಳನ್ನು ಬುಡಮೇಲು ಮಾಡಿದ್ದಾರೆ. ಹೀಗೆ ಪ್ರಮುಖ ತತ್ವಪದಕಾರರ ತತ್ವಪದಗಳ ಸಹಾಯದಿಂದ ಈ ಅಧ್ಯಾಯನವನ್ನು ಸಿದ್ಧಪಡಿಸಿದ್ದೇನೆ.

- **ಅಧ್ಯಾಯ – ೫ "ತತ್ವಪದಗಳಲ್ಲಿ ಪ್ರತಿಭಟನಾ ಮಾದರಿ"** ಅಧ್ಯಯದಲ್ಲಿ ಮಹಿಳೆ ಕಲಾನಂತರ ಸಮಾಜದಲ್ಲಿ ನಡೆಯುವ ಪುರುಷ ದೌರ್ಜನ್ಯದಿಂದ ಬೇಸತ್ತು ಪುರುಷ ಪ್ರಧಾನ ಸಮಾಜದ ವಿರುದ್ಧ ಪ್ರತಿಭಟನಾ ಮಾದರಿಯನ್ನು ಅನುಸರಿಸುತ್ತಾಳೆ. ಮಹಿಳೆಯರು ಮತ್ತು ಮಹಿಳಾ ತತ್ವಪದಗಾರ್ಥಿಯರು ಮಹಿಳಾ ಪರ ದನಿ ಎತ್ತಿ ಸಮಾಜದ ನೀತಿ ನಿಯಮಗಳ ವಿರುದ್ಧ ಪ್ರತಿರೋಧ ಒಡ್ಡಿರುವುದರ ಜೋತೆಗೆ ಪುರುಷ ತತ್ವಪದಕಾರರು ಮಹಿಳೆಯರಿಗೆ ಉತ್ತೇಜನ ನೀಡುವ ಪದಗಳನ್ನು ಅವಲೋಕಿಸಿ ಮಹಿಳೆಯರು ಅನುಸರಿಸಿದ ಪ್ರತಿಭಟನಾ ಮಾದರಿಯ ತತ್ವಪದಗಳನ್ನು ಗ್ರಹಿಸುವ ಮೂಲಕ ಅಧ್ಯಯನ ಮಾಡಲಾಗಿದೆ. ಆಧುನಿಕ ಸಮಾಜದಲ್ಲಿ ಮಹಿಳೆಯರು ಸಾಮಾಜಿಕವಾಗಿ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಪ್ರತಿಭಟನೆ ಮಾಡುವಂತೆ ತತ್ವಪದಕಾರರು ವಿಶೇಷವಾಗಿ ಮಹಿಳಾ ತತ್ವಪದಗಾರ್ತಿಯರು ಸಾಮಾಜಿಕ ಶೋಷಣೆ ವಿರುದ್ಧ ಹೋರಾಟದ ಕಿಚ್ಚು ಹಚ್ಚುವ ತತ್ವಪದಗಳನ್ನು ಬರೆದಿದ್ದಾರೆ. ತತ್ವಪದಕಾರ್ತಿಯರಿಗೆ ಅಕ್ಕಮಹಾದೇವಿ, ನಿಲಾಂಬಿಕೆ ಮುಂತಾದ ವಚನಗಾರ್ತಿಯರ ಪ್ರಭಾವ ಬೀರಿದೆ. ತಮ್ಮ ತತ್ವಪದಗಳಲ್ಲಿ ವಚನಗಾರ್ತಿಯರನ್ನು ನೆನೆದಿರುವುದರಿಂದ ತಿಳಿಯಬಹುದು. ಪುರುಷ ಸಮಾಜದ ಜೀವನ ಕ್ರಮದಲ್ಲಿ ಮಹಿಳೆ ಎರಡನೇ ದರ್ಜೆಯವಳಾಗಿಯೇ ಗುರುತಿಸಿಕೊಂಡಿದ್ದಾಳೆ. ಅದು ಅವಳ ದೈಹಿಕ ಕಾರಣಕ್ಕೊ, ಜೈವಿಕ ಕಾರಣಕ್ಕೊ ಅಥವಾ ಹೆಣ್ಣು ಎಂಬ ಲಿಂಗತಾರತಮ್ಯಕ್ಕೊ ಚರ್ಚಿಸಬೇಕಿದೆ. ಕೌಟುಂಬಿಕವಾಗಿಯೇ ಹೆಣ್ಣು ಶೋಷಣೆಯನ್ನು ಅನುಭವಿಸುತ್ತಾಳೆ. ಸಮಾಜದ ಅನಿಷ್ಟ ಪದ್ಧತಿಗಳಾದ ಸತಿಸಹಗಮನ ಪದ್ಧತಿ, ಬಸವಿ ಪದ್ಧತಿಗೂ ಒಳಗಾಗಿ ಶೋಷಿತಳಾಗಿ ಬದುಕು ಮಾಡುತ್ತಾ ಅಸಹಯಕಳಾಗಿ ಮೌನವಹಿಸುತ್ತಾಳೆ. ವರದಕ್ಷಿಣೆ ಪದ್ಧತಿಗಳಿಂದಲೂ ಸ್ತ್ರೀಯರ ಜೀವನ ಪುರುಷರ ಕೈಗೆ ಸಿಕ್ಕಿ ಹೈರಾಣವಾಗಿ ಹೋಗಿದೆ. ಗಂಡು ಹೆಣ್ಣು ಎಂಬ ಲಿಂಗತಾರತಮ್ಯದಿಂದ ಹೆಣ್ಣಿಗೆ ದೊರಕಬೇಕಾದ ಸ್ಥಾನಮಾನ ಪುರುಷನ ಪಾಲಾಗಿ ಹೆಣ್ಣು ಮೂಲೆಗುಂಪಾಗಿ ಬದುಕುಮಾಡುತ್ತಿದ್ದಾಳೆ. ಪ್ರಾಣಿ ಬಲಿ ಕೊಡುವಂತ ಮೌಢ್ಯ ಆಚರಣೆಗಳಲ್ಲಿ ಸ್ತ್ರೀ ದೇವತೆಯನ್ನೇ ಪೂಜಿಸಿ ಮಾರಿ ಎಂದಿಲ್ಲಾ ಸಂಬೋದಿಸಿ ಹೆಣ್ಣನ್ನು ತಳಮಟ್ಟಕ್ಕೆ ತಳ್ಳಬಿಟ್ಟಿದೆ. ಅಸಮಾನತೆಯ ನೆಲೆಯಲ್ಲಿ ಮಹಿಳೆಯರನ್ನು ನಿಕೃಷ್ಠವಾಗಿ ಕಾಣುವುದರ ಜೊತೆಗೆ ಅವಳನ್ನು ಹೊನ್ನು, ಮಣ್ಣಿಗೆ ಹೋಲಿಕೆ ಮಾಡಿದ್ದಾರೆ. ಒಟ್ಟಾರೆಯಾಗಿ ಆಧುನಿಕ ಸಮಾಜದಲ್ಲಿ ಮಹಿಳಾ ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಲೋಕವಿಹಾರಿಗಳಾದ ತತ್ವಪದಕಾರರು ತಮ್ಮ ತತ್ವಪಪದಗಳ ಮೂಲಕ ಪುರುಷ ಸಮಾಜವನ್ನು ಮತ್ತು ಅನಿಷ್ಟ ಪದ್ಧತಿಗಳು, ಮೌಢ್ಯ ಆಚರಣೆಗಳನ್ನು

ಅಂಗತಾರತಮ್ಯ ನೀತಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಮುಖ್ಯಗುಣ ಸಮಾಜದ ಮೇಲೆ ಪ್ರಭುತ್ವ ಸಾಧಿಸಿರುವವರ ಪ್ರಭುತ್ವದ ಪುರುಷ ಸಮಾಜವನ್ನು ಪ್ರಶ್ನಿಸುವುದು, ಪ್ರತಿಭಟಿಸುವುದೆ ಆಗಿದೆ. ಕಾಲ ಘಟ್ಟಗಳಿಗೆ ತಕ್ಕಂತೆ ಪ್ರತಿರೋಧದ ಸ್ವರೂಪ ಬದಲಾಗುತ್ತದೆ. ವಚನಗಾರ್ತಿಯರು ಶಿವಭಕ್ತರಾಗಿ, ಕಾಯಕವನ್ನೆ ಕೈಲಾಸವೆಂದು ನಂಬಿ ಈಹ-ಪರಕ್ಕೂ ಶಿವನೊಬ್ಬನೆ ಪತಿಯೆಂದು ತಿಳಿದು, ಶೋಷಿತ ಮಹಿಳೆಯರ ದನಿಯಾದರೆ ಹದಿನೇಳು, ಹದಿನೆಂಟು, ಹತ್ತೊಂಬತ್ತನೇ ಶತಮಾನದ ತತ್ವಪದಗಾರ್ತಿಯರು ಸಮಾಜದಲ್ಲಿನ ಅಂಗರಾಜಕರಣ, ಪುರುಷರ ದಬ್ಬಾಳಿಕೆಯನ್ನು ಮೆಟ್ಟಿನಿಂತು ಸಮಾಜದ ಮಹಿಳಾ ಶೋಷಣೆಯ ಸಮಾಜ ಸ್ಥಾಪಿತ ಕಟ್ಟುಪಾಡುಗಳ ವಿರುದ್ಧ ಪ್ರತಿಭಟಿಸಿದವರು ತತ್ವಪದಗಾರ್ತಿಯರು ಹೆಚ್ಚಾಗಿ ದೇಹದ ಬಗೆಗೆ ಮನಸ್ಸಿನ ಬಗೆಗೆ ಪ್ರತಿರೋಧ ಒಡ್ಡಿ ದೇಹ-ಮನಸ್ಸಿನ ಶುದ್ಧತೆಗೆ ಆಧ್ಯತೆ ನೀಡಿದವರು.

- **"ಸಮಾರೋಪ"** ಅಧ್ಯಯದಲ್ಲಿ ನಿಯೋಜಿತ ಅಧ್ಯಯನದ ಫಲಿತಗಳನ್ನು ಕ್ರೂಢೀಕರಿಸಿ ನೀಡಲಾಗುವುದು ಅನುಬಂಧದಲ್ಲಿ ಆಕರ ಗ್ರಂಥಗಳು, ಪರಾಮರ್ಶನ ಕೃತಿಗಳು, ಲೇಖನಗಳ ಪಟ್ಟಿಯನ್ನು ನೀಡಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಅಮರೇಶ ನುಗಡೋಣಿ. (೧೯೯೯). ನುಡಿವ ಬೆಡಗು. (ಪ್ರಥಮ ಮುದ್ರಣ) ಹಂಪಿ:ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಅಮರೇಶ ನುಗಡೋಣಿ. (೨೦೧೪). ತತ್ವಪದ ಸಾಹಿತ್ಯ ಅಧ್ಯಯನ.(ಪ್ರಥಮ ಮುದ್ರಣ). ಹಂಪಿ:ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ಆನಂದ ಮೂರ್ತಿ ಜಿ. ವಿ. (ಸಂ). (ಸಂ ೨೯. ೨೦೧೭). ಕನಕದಾಸರು ಮತ್ತು ಮಹಿಪತಿರಾಯರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪. ಉಜ್ಜಜ್ಜಿ ರಾಜಣ್ಣ. (ಸಂ). (ಸಂ ೧೦. ೨೦೧೭) ಕಲ್ಲೂರ ರುದ್ರಮುನಿದೇವ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೫. ಉಜ್ಜಜ್ಜಿ ರಾಜಣ್ಣ. (ಸಂ). (ಸಂ ೧೦. ೨೦೧೭) ಕಲ್ಲೂರ ರುದ್ರಮುನಿದೇವ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೬. ಕಬ್ಬಿನಾಲೆ ವಸಂತ ಭಾರದ್ವಾಜ. (೨೦೧೦). ಕನ್ನಡದಲ್ಲಿ ತತ್ವಪದಗಳು. (ಪ್ರಥಮ ಮುದ್ರಣ). ಮೈಸೂರು:ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ. ಕರ್ನಾಟಕ ರಾಜ್ಯಾ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ ಮೈಸೂರು.

೭. ಕರಿಯಪ್ಪ ಮಾಳಗ ಜೆ. (ಸಂ). (ಸಂ ೨೨. ೨೦೧೭). ಹೊನ್ನೇಹಳ್ಳಿ ದಾಸಗಿರಿಯಪ್ಪ ಸಕ್ರಪ್ಪತಾತ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೮. ಕಾಳೆಗೌಡ ನಾಗವಾರ (ಪ್ರೊ) ಮತ್ತು ಆನಂದಮೂರ್ತಿ ಜಿ.ವಿ. (ಸಂ). (೨೦೦೦). ಹಲವು ತೋಟದ ಹೂಗಳು.(ಪ್ರಥಮ ಮುದ್ರಣ). ಬೆಂಗಳೂರು:ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಭವನ ಬೆಂಗಳೂರು.

೯. ಕಾಳೆಗೌಡ ನಾಗವಾರ (ಪ್ರೊ) ಮತ್ತು ಆನಂದಮೂರ್ತಿ ಜಿ.ವಿ. (ಸಂ). (೨೦೦೧). ಗರಿಗೆದರಿದ ನವಿಲು. (ಪ್ರಥಮ ಮುದ್ರಣ). ಬೆಂಗಳೂರು:ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಭವನ ಬೆಂಗಳೂರು.

೧೦. ಕಾಶೀನಾಥ ರೆಡ್ಡಿ ಎಚ್. (ಸಂ). (ಸಂ ೧೫. ೨೦೧೭). ಸಿದ್ಧಪ್ರಭು ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೧. ಕಾ ತ ಚಿಕ್ಕಣ್ಣ (ಸಂ). (೨೦೧೪). ಅರಿವಿನ ಅಡಿಗೆ.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೨. ಕೃಷ್ಣಮೂರ್ತಿ ಹಾನೂರು ಮತ್ತು ಮಹೇಶ್ ಹರವೆ ಬಿ. (ಸಂ). (ಸಂ ೩೨. ೨೦೧೭). ಮುಪ್ಪಿನ ಷಡಕ್ಷರಿ ಮತ್ತು ನಿಜಗುಣಿ ಶಿವಯೋಗಿ ಅವರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೩. ಕೃಷ್ಣಮೂರ್ತಿ ಹಾನೂರು (ಸಂ). (ಸಂ ೭. ೨೦೧೭). ಚಿದಾನಂದಾವಧೂತರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೪. ಕ್ಯಾತನಹಳ್ಳಿ ರಾಮಣ್ಣ (ಸಂ). (೧೯೭೬). ಬೀದರ ಜಿಲ್ಲೆಯ ಜನಪದ ಗೀತೆಗಳು. ಮೈಸುರು ವಿಶ್ವವಿದ್ಯಾನಿಲಯ:ಕನ್ನಡ ಅಧ್ಯಯನ ಸಂಸ್ಥೆ.

೧೫. ಚನ್ನವೀರಪ್ಪ ಎಸ್.ಆರ್. (ಸಂ). (೨೦೦೦). ನಾಗಲಿಂಗಸ್ವಾಮಿ ತತ್ವಪದಗಳು.(ಪ್ರಥಮ ಮುದ್ರಣ). ಹಂಪಿ:ಕನ್ನಡ ವಿಶ್ವವಿದ್ಯಾನಿಲಯ ಪ್ರಸಾರಾಂಗ ಹಂಪಿ.

೧೬. ಚಕ್ಕರೆ ಶಿವಶಂಕರ್. (ಸಂ). (ಸಂ ೧೮. ೨೦೧೭). ಹಾಗಲವಾಡಿ ಮುದ್ವೀರಸ್ವಾಮಿ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೭. ಜಗನ್ನಾಥ ಹೆಬ್ಬಾಳೆ. (ಸಂ). (ಸಂ ೧೬. ೨೦೧೭). ಮರುಕುಂದಿ ಬಸವಣ್ಣ ಮತ್ತು ಇತರರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೮. ಜಾಜಿ ದೇವೆಂದ್ರಪ್ಪ. (ಸಂ). (ಸಂ ೨೮. ೨೦೧೭). ಹೊಲಗುಂದಿ ಸಾಯಿಸುಬ್ಬಣ್ಣ ತಾತನವರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೧೯. ತಿಪ್ಪೇರುದ್ರಸ್ವಾಮಿ ಎಚ್. (೧೯೯೨). ಅನುಭಾವ ಪಥ.(ಪ್ರಥಮ ಮುದ್ರಣ). ಗುಲುಬರ್ಗಾ:ಸದ್ಭಾವ ಸಂಪದ ಪ್ರಕಾಶನ.

೨೦. ನಟರಾಜು ಬೂದಾಳು ಎನ್. (ಸಂ). (ಸಂ ೮. ೨೦೧೭). ತುರುವನೂರು ಅಂಗಾರ್ಯರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೧. ನಟರಾಜು ಬೂದಾಳು ಎನ್. (ಸಂ). (ಸಂ ೪. ೨೦೧೭). ಶಂಕರಾನಂದಯೋಗಿ ಮತ್ತು ಶಂಕರಾರ್ಯರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.೩೦

೨೨. ನಾಗಭೂಷಣಸ್ವಾಮಿ ಓ. ಎಲ್. (ಸಂ). (೨೦೦೦). ತತ್ವಪದಗಳು. (ಪ್ರಥಮ ಮುದ್ರಣ). ಹಂಪಿ:ಕನ್ನಡ ವಿಶ್ವವಿದ್ಯಾನಿಲಯ ಪ್ರಸಾರಾಂಗ.

೨೩. ನೀಲಾ ಕೆ. (ಸಂ). (ಸಂ ೨೦. ೨೦೧೭). ರಾಂಪೂರದ ಬಕ್ಕಪ್ಪ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೪. ನೀಲಾ ಕೆ. (ಸಂ). (ಸಂ ೨೧. ೨೦೧೭). ಎಲೆರಾಜೋಳ ಕರಿಘೂಳೇಶ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೫. ನಂಜುಂಡಸ್ವಾಮಿ ಬಿ. (ಸಂ). (ಸಂ ೬. ೨೦೧೭). ಸೋಮೇಕಟ್ಟೆ ಕರಿವೃಷಭೇಂದ್ರಸ್ವಾಮಿ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೬. ಪದ್ಮಾಲಯ ನಾಗರಾಜು. (ಸಂ). (ಸಂ ೫. ೨೦೧೭). ಕೈವಾರ ನಾರಯಣಪ್ಪ ಮತ್ತು ಇತರರ ತತ್ವಪದಗಳು.(ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೭. ಪೀರ್ ಬಾಷಾ ಬಿ. (ಸಂ). (ಸಂ ೧೩. ೨೦೧೭). ಶಿಲವೇರಿ ಶಿವಪ್ಪನವರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೨೮. ಪೂಜಾರ ವ್ಹಿ.ಜಿ. (ಸಂ). (ಸಂ ೨. ೨೦೧೩). ವಚನ–ಸ್ವರವಚನ ಹಾಗೂ ತತ್ವಪದ ಸಾಹಿತ್ಯ ಕುರಿತ ಲೇಖನಗಳು.(ಪ್ರಥಮ ಮುದ್ರಣ). ಬೆಳಗಾವಿ:ಗೀತಶ್ರೀ ಎಂಟರ್ ಪ್ರೈಸಸ್.

೨೯. ಪೂಜಾರ ವ್ಹಿ.ಜಿ. (ಸಂ). (ಸಂ ೧. ೨೦೧೩). ಕನ್ನಡ, ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತ ಲೇಖನಗಳು.(ಪ್ರಥಮ ಮುದ್ರಣ). ಬೆಳಗಾವಿ:ಗೀತಶ್ರೀ ಎಂಟರ್ ಪ್ರೈಸಸ್.

೩೦. ಪೂಜಾರ ವ್ಹಿ.ಜಿ. (೨೦೦೭). ಆಯ್ದ ತತ್ವಪದಗಳು. ಗುಲಬರ್ಗಾ:ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ.

೩೧. ಪಂಡಿತ ನಾಗಭೂಷಣ ಶಾಸ್ತ್ರಿಮಠ. (ಸಂ). (೧೯೮೫). ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ.(ಪ್ರಥಮ ಮುದ್ರಣ). ಬೆಂಗಳೂರು:ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೩೨. ಪ್ರಕಾಶ ಗ.ಖಾಡೆ. (೨೦೧೦). ನೆಲಮೂಲ ಸಂಸ್ಕೃತಿ. (ಪ್ರಥಮ ಮುದ್ರಣ). ಮೈಸೂರು:ಕಿಟಕಿ ಪ್ರಕಾಶನ.

೩೩. ಪ್ರಭು ಖಾನೆಪುರೆ. (ಸಂ). (ಸಂ ೧೭. ೨೦೧೭). ದ್ಯಾಗಾಯಿ ಗುಂಡಪ್ಪ ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೩೪. ಬಸವರಾಜ ಸಬರದ. (೨೦೦೦). ಹೈದರಬಾದ್ ಕರ್ನಾಟಕದ ತತ್ವಪದಗಳು. (ಪ್ರಥಮ ಮುದ್ರಣ). ಹಂಪಿ:ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

೩೫. ಬಸವಲಿಂಗ ಸೊಪ್ಪಿಮಠ. (ಸಂ). (ಸಂ ೨೪. ೨೦೧೭). ಕೊಡೇಕಲ್ಲು ಬಸವಣ್ಣನವರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೩೬. ಬಸವರಾಜ ಸಬರದ. (ಸಂ). (ಸಂ ೧೪. ೨೦೧೭). ಕೂಡಲೂರು ಬಸವಲಿಂಗ ಶರಣರು ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೩೭. ಬಸವರಾಜ ಸಬರದ. (೨೦೦೫). ನಡದದ್ದೇ ದಾರಿ. (ಪ್ರಥಮ ಮುದ್ರಣ). ಕಲಬುರ್ಗಿ:ಪಲ್ಲವಿ ಪ್ರಕಾಶನ.

೩೮. ಮಣಿಕಾನಂದ ಎ.ಎಸ್. (ಸಂ). (ಸಂ ೧೨. ೨೦೧೭). ಬಾಲಲೀಲಾ ಮಹಾಂತ ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೩೯. ಮಹಾದೇವ ಶಂಕನಪುರ. (೨೦೦೮). ಚಾಮರಾಜನಗರ ಜಿಲ್ಲೆಯ ಜನಪದ ಕಲಾವಿದರು. (ಪ್ರಥಮ ಮುದ್ರಣ). ಬೆಂಗಳೂರು:ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಕನ್ನಡ ಭವನ.

೪೦. ಮಿನಾಕ್ಷಿಬಾಳ. (೧೯೯೭). ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು:ಸ್ನೇಹ ಪ್ರಿಂಟರ್ಸ್.

೪೧. ಮೀನಾಕ್ಷಿ ಬಾಳ. (ಸಂ). (ಸಂ ೨೭. ೨೦೧೭). ಮಹಿಳಾ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೨. ಮೀನಾಕ್ಷಿ ಬಾಳ. (ಸಂ). (ಸಂ ೨೬. ೨೦೧೭). ನಿಂಬರಗಿ ಮಹಾರಾಜರು ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೩. ಮೀನಾಕ್ಷಿ ಬಾಳ. (ಸಂ). (ಸಂ ೩. ೨೦೧೭). ಕಡಕೋಳ ಮಡಿವಾಳಪ್ಪ ಮತ್ತು ಶಿಷ್ಯರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೪. ರಹಮತ್ ತರೀಕೆರೆ ಮತ್ತು ಅರುಣ್ ಜೋಳದ ಕೂಡ್ಲಿಗಿ. (ಸಂ). (ಸಂ ೧. ೨೦೧೭). ತತ್ವಪದ ಪ್ರವೇಶಿಕೆ. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೫. ರಹಮತ್ ತರೀಕೆರೆ. (ಸಂ). (ಸಂ ೨೩. ೨೦೧೭). ಸಾಲಗುಂದಿ ಗುರುಪೀರಾ ಖಾದರಿ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೬. ರಂಗನಾಥ ಕುಂಕನಕುಂಟೆ. (ಸಂ). (ಸಂ ೧೯. ೨೦೧೭). ಸರ್ಪಭೂಷಣ ಶಿವಯೋಗಿಗಳ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೪೭. ರಂಗಾರೆಡ್ಡಿ ಕೋಡಿರಾಂಪುರ. (ಸಂ). (ಸಂ ೪. ೨೦೦೬). ತತ್ವಪದಗಳು ಪದ್ಯಸಾಹಿತ್ಯ. (ಪ್ರಥಮ ಮುದ್ರಣ). ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೪೮. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (೨೦೦೧). ಶಿಶುನಾಳ ಶರೀಫ ಸಾಹೇಬರ ಗೀತೆಗಳು. (ಪ್ರಥಮ ಮುದ್ರಣ). ಬೆಂಗಳೂರು:ರೋಹಿಣಿ ಪ್ರಿಂಟರ್ಸ್.

೪೯. ವಿಜಯಶ್ರೀ ಸಬರದ. (೧೯೯೭). ಗುರುಶಿಷ್ಯರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳುರು:ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೫೦. ವಿಜಯಶ್ರೀ ಸಬರದ. (ಸಂ). (ಸಂ ೧೧. ೨೦೧೭). ನೀರಲಕೇರಿ ಬಸವಲಿಂಗ ಶರಣರು ಮತ್ತು ಇತತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೫೧. ವೀರಣ್ಣ ದಂಡೆ. (೨೦೦೧). ದೇಶೀ ದೃಷ್ಟಿ–ತತ್ವಪದಗಳು:ಅನುಭಾವಿಕ ನೆಲೆ. (ಪ್ರಥಮ ಮುದ್ರಣ)

೫೨. ಶರಣಪ್ಪ ಗುಡಿದಿನ್ನಿ. (೨೦೦೭). ಪುಣ್ಯಪುರುಷರು(ವ್ಯಕ್ತಿ ಚಿತ್ರಗಳು). (ಪ್ರಥಮ ಮುದ್ರಣ). ದೆವದುರ್ಗ:ಕಾವ್ಯಲಯ ಪ್ರಕಾಶನ.

೫೩. ಶಿವಾನಂದ ಗುಬ್ಬಣ್ಣ. (ಸಂ). (೧೯೯೩). ಶಿಶುನಾಳ ಶರೀಫ್ ಗೀತೆಗಳು. (ಪ್ರಥಮ ಮುದ್ರಣ). ಧಾರವಾಡ:ಅಕ್ಷಯ ಪ್ರಕಾಶನ.

೫೪. ಶಿವಾನಂದ ಗುಬ್ಬಣ್ಣ. (ಸಂ). (೧೯೮೮). ಚಲವಾದಿ ಚಂದಪ್ಪನ ಅನುಭಾವ ಪದಗಳು. (ಪ್ರಥಮ ಮುದ್ರಣ). ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ.

೫೫. ಶಿವಾನಂದ ಗುಬ್ಬಣ್ಣ. (೨೦೦೮). ಶಿಶುನಾಳ ಶರೀಫ್. (ಪ್ರಥಮ ಮುದ್ರಣ). ಧಾರವಾಡ:ಕರ್ನಾಟಕ ವಿಶ್ವವಿದ್ಯಾನಿಲಯ.

೫೬. ಶಿವಾನಂದ ವಿರಕ್ತಮಠ. (ಸಂ). (ಸಂ ೨೫. ೨೦೧೭). ಕೊಡೇಕಲ್ಲು ಬಸವಣ್ಣ ಮತ್ತು ರಾಚಪ್ಪಯ್ಯ ಮತ್ತಿತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೫೭. ಶಿವಾನಂದ ಗುಬ್ಬಣ್ಣ. (ಸಂ) (ಸಂ ೨. ೨೦೧೭). ಶಿಶುನಾಳ ಶರೀಫರ ತತ್ವಪದಗಳು. (ಪ್ರಥಮ ಮುದ್ರಣ). ಧಾರವಾಡ:ಕರ್ನಾಟಕ ವಿಶ್ವವಿದ್ಯಾಲಯ.

೫೮. ಶಿವರಾಜ ಯತಗಲ್. (ಸಂ). (೨೦೧೫). ಪಂಚಭೂತದ ಬಣ್ಣದ ಗಡಿಗಿ:ಶ್ರೀರಾಮಾನಂದರ ತತ್ವಪದಗಳು. (ಪ್ರಥಮ ಮುದ್ರಣ). ಕಸಬಲಿಂಗಸೂಗೂರು:ಪಲ್ಲವಿ ಪ್ರಕಾಶನ.

೫೯. ಶೋಭಾ ಸುರೇಶ್ ಬಿ.ವಿ. (ಸಂ) (ಸಂ ೩೧. ೨೦೧೭). ಪರಮದೇವ ನರಹರಿಗುರು ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೬೦. ಶೋಭಾ ಸುರೇಶ್ ಬಿ.ವಿ. (ಸಂ) (ಸಂ ೩೦. ೨೦೧೭). ವೀಣಾ ಗುರುಬಸವಾರ್ಯ ಮತ್ತು ಇತರರ ತತ್ವಪದಗಳು. (ಪ್ರಥಮ ಮುದ್ರಣ). ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

೬೧. ಅನುಪಮಾ.ಎಚ್.ಎಸ್, ಮಹಿಳೆ-ದಲಿತತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ, ೨೦೧೨, ಮೊದಲ ಮುದ್ರಣ.

೬೨. ಅನುಪಮಾ.ಎಚ್.ಎಸ್, ಹೆಣ್ಣು-ಸಂಕರ ಕಾಲದ ಆತ್ಮಪ್ರಜ್ಞೆ, ಲಡಾಯಿ ಪ್ರಕಾಶನ, ೨೦೧೩, ಮೊದಲ ಮುದ್ರಣ.

೬೩. ಅನಿತಾ ಭಂಡಾರೆ, ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಗಂಗಾ ಪ್ರಿಂಟರ್ಸ್, ಬೆಂಗಳೂರು, ೨೦೧೨, ಮೊದಲ ಮುದ್ರಣ.

೬೪. ಅಶ್ವಿನಿ ಧೋಂಗಡೆ, ಅನುವಾದ-ವಿಠಲರಾವ್ ಟಿ.ಗಾಯಕ್ವಾಡ್, ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಮೊದಲ ಮುದ್ರಣ.

೧೫. ಇಂದಿರಾ ಜೈ ಪ್ರಕಾಶ್, ಸ್ತ್ರೀವಾದಿ ಮನೋವಿಜ್ಞಾನ, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, ೨೦೦೯, ಮೊದಲ ಮುದ್ರಣ.

೧೬. ಉಷಾ.ಎಂ, ಭಾಷಾಂತರ ಮತ್ತು ಲಿಂಗರಾಜಕಾರಣ-ವಸಾಹತು ಭಾಷಾಂತರಗಳ ಲಿಂಗತ್ವ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಮೊದಲ ಮುದ್ರಣ.

೧೭. ಉಷಾ.ಎಂ, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭, ಮೊದಲ ಮುದ್ರಣ.

೧೮. ಚಂದ್ರಶೇಖರ್.ಟಿ.ಆರ್, ಮಹಿಳಾ ಅಧ್ಯಯನ ಪರಿಭಾಷೆ, ರಾಜಾ ಪ್ರಿಂಟರ್ಸ್, ಬೆಂಗಳೂರು, ೨೦೧೬, ಮೊದಲ ಮುದ್ರಣ.

೧೯. ಚಿದಾನಂದ ಮೂರ್ತಿ, ವಚನ ಸಾಹಿತ್ಯ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫, ಮೊದಲ ಮುದ್ರಣ.

೨೦. ಜ.ಹೋ.ನಾ, ಮನುಸ್ಮೃತಿ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ, ೨೦೦೯, ಮೊದಲ ಮುದ್ರಣ.

೨೧. ದೊಡ್ಡನಾಯ್ಕ.ಎಚ್, ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೬, ಮೊದಲ ಮುದ್ರಣ.

೨೨. ನಾಗಮೋಹನ್‌ದಾಸ್.ಹೆಚ್.ಎನ್, ಮಹಿಳಾ ಅಸಮಾನತೆ, ಚಿಂತನ ಪ್ರಕಾಶನ, ೨೦೧೪, ಮೊದಲ ಮುದ್ರಣ.

೨೩. ಬಿದರಿ ಚಂದ್ರಕಲಾ, ಮಹಿಳಾ ಬದುಕು, ತನುಮನು ಪ್ರಕಾಶನ, ಮೈಸೂರು, ೨೦೦೯, ಮೊದಲ ಮುದ್ರಣ.

೨೪. ಮಂದಾಕಿನಿ ಪುರೋಹಿತ, ಜನಪದ ಸಾಹಿತ್ಯದಲ್ಲಿ ಮಹಿಳಾ ಪ್ರತಿಭಟನೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬, ಮೊದಲ ಮುದ್ರಣ.

೨೫. ವಿನಯಾ, ಭಾರತೀಯ ಭಾಷೆಗಳಲ್ಲಿ ಮಹಿಳಾ ಸಾಹಿತ್ಯ, ರಾಜಾ ಪ್ರಿಂಟರ್ಸ್, ಬೆಂಗಳೂರು, ೨೦೧೭, ಮೊದಲ ಮುದ್ರಣ.

೨೬. ವೀರಣ್ಣ ರಾಜೂರ, ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩, ಮೊದಲ ಮುದ್ರಣ.

೨೭. ಸಬಿಹಾ ಭೂಮಿಗೌಡ, (ಸಂ), ಮಹಿಳಾ ಆತ್ಮಕತೆಗಳು:ಅನುಸಂಧಾನ, ಪದ್ಮಶ್ರೀ ಪ್ರಿಂಟರ್ಸ್, ಬೆಂಗಳೂರು, ೨೦೦೭, ಮೊದಲ ಮುದ್ರಣ.

೨೮. ಸುಮಿತ್ರಾಬಾಯಿ.ಬಿ.ಎನ್, ಸ್ತ್ರೀವಾದ ಒಂದು ಅವಲೋಕನ, ಅಹರ್ನಿತಾ ಪ್ರಕಾಶನ, ಶಿವಮೊಗ್ಗ, ೨೦೧೮, ಮೊದಲ ಮುದ್ರಣ.

೭೯. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೨, ಮೊದಲ ಮುದ್ರಣ.

೮೦. ಸೋಮಕ್ಕ ಮಾದಾಪುರ, ತಂಬೂರಿನಾದ, ಎಸ್.ಎಲ್.ಎನ್. ಪಬ್ಲಿಕೇಶನ್, ಬೆಂಗಳೂರು, ೨೦೨೨, ಮೊದಲ ಮುದ್ರಣ.

೮೧. ಶಿವಾನಂದ ಎಸ್. ವಿರಕ್ತಮಠ, ಮಹಿಳೆ ಮತ್ತು ಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಮೊದಲ ಮುದ್ರಣ.

೮೨. ಶ್ರೀಮತಿ.ಎಚ್.ಎಸ್, ಸ್ತ್ರೀವಾದ-ಪದ ವಿವರಣಕೋಶ, ಧರಣಿ ಪ್ರಿಂಟರ್ಸ್, ಬೆಂಗಳೂರು, ೨೦೧೮, ಮೊದಲ ಮುದ್ರಣ.

೮೩. ಶ್ರೀಮತಿ.ಎಚ್.ಎಸ್, ಸ್ತ್ರೀವಾದ-ಚಿಂತನೆ ಮತ್ತು ಹೋರಾಟ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೯, ಮೊದಲ ಮುದ್ರಣ.

೮೪. ಹಾ.ವೀ.ಮಂಜುಳಾ ಶಿವಾನಂದ, ಭಕ್ತಿಮಾರ್ಗದ ಪ್ರೇಮಯೋಗಿನಿಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦, ಮೊದಲ ಮುದ್ರಣ.

೮೫. ಹೇಮಲತಾ.ಎಚ್.ಎಮ್, ಮಹಿಳಾ ಸಶಕ್ತೀಕರಣ:ಒಂದು ಪರಿಕಲ್ಪನೆ, ರಾಜಾ ಪ್ರಿಂಟರ್ಸ್, ಬೆಂಗಳೂರು, ೨೦೧೩, ಮೊದಲ ಮುದ್ರಣ.

ಸಂಶೋಧನಾ ವಿದ್ಯಾರ್ಥಿ ಮಾರ್ಗದರ್ಶಕರು